ಸಂಪುಟ 01 | ಸಂಚಿಕೆ 137 | ಗುರುವಾರ 23 ಜುಲೈ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ
REGIONAL KANNADA DAILY MORNING

ಸಿಂಧನೂರು, ಮಸ್ಕಿ
ಮಾನ್ವಿ, ಅಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1)ರಾಷ್ಟ್ರೀಯ ಪ್ರಸಾರ ದಿನ (National Broadcasting Day India)

1927ರ ಜುಲೈ 23ರಂದು ಭಾರತದಲ್ಲಿ ಮೊದಲ ರೇಡಿಯೋ ಪ್ರಸಾರ ಆರಂಭವಾದ ನೆನಪಿಗಾಗಿ ಈ ದಿನವನ್ನು ಆಚರಿಸಲಾಗುತ್ತದೆ. ಭಾರತೀಯ ಪ್ರಸಾರ ಸೇವೆಯ ಬೆಳವಣಿಗೆ ಮತ್ತು ಮಾಧ್ಯಮಗಳ ಮಹತ್ವವನ್ನು ಸ್ಮರಿಸುವ ದಿನ.

2)ವಿಶ್ವ ತಿಮಿಂಗಿಲ ಮತ್ತು ಡಾಲ್ಫಿನ್ ದಿನ (World Whale and Dolphin Day)

ಸಮುದ್ರದಲ್ಲಿನ ತಿಮಿಂಗಿಲಗಳು ಮತ್ತು ಡಾಲ್ಫಿನ್‌ಗಳ ಸಂರಕ್ಷಣೆ, ಸಮುದ್ರ ಪರಿಸರದ ರಕ್ಷಣೆ ಮತ್ತು ಜೀವ ವೈವಿಧ್ಯದ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವ ದಿನ.
ನೇಮಕಾತಿ

## ಸುಭಾಷಿತ

ಹತ್ತು ಜನ ಸ್ನೇಹಿತರೊಂದಿಗೆ
ಕುಳಿತುಕೊಂಡು ಒಬ್ಬರ ಬಗ್ಗೆ ಕೆಟ್ಟದ್ದನ್ನು
ಮಾತನಾಡುವುದಕ್ಕಿಂತ, ಒಂಟಿಯಾಗಿ
ಕುಳಿತು ಒಂದು ಪುಸ್ತಕವನ್ನು ಓದುವುದು
ಉತ್ತಮವಾದ ಕೆಲಸ.

-ಡಾ.ಬಿ.ಆರ್.ಅಂಬೇಡ್ಕರ್

# ನೀಟ್ ಪರೀಕ್ಷೆ ಅಕ್ರಮ ಖಂಡಿಸಿ
# ಬಿಜೆಪಿ ಕಚೇರಿಗೆ ಕಾಂಗ್ರೆಸ್ ಕಾರ್ಯಕರ್ತರ ಮುತ್ತಿಗೆ

❑ ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ದೇಶದ ಕೋಟ್ಯಂತರ ವಿದ್ಯಾರ್ಥಿಗಳ ಭವಿಷ್ಯದೊಂದಿಗೆ ಚೆಲ್ಲಾಟವಾಡಿರುವ ನೀಟ್ ಪರೀಕ್ಷೆಯಲ್ಲಿನ ಅಕ್ರಮ, ಪ್ರಶ್ನೆಪತ್ರಿಕೆ ಸೋರಿಕೆ ಹಾಗೂ ಪರೀಕ್ಷಾ ವ್ಯವಸ್ಥೆಯ ವೈಫಲ್ಯವನ್ನು ಖಂಡಿಸಿ, ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ನೈತಿಕ ಹೊಣೆ ಹೊತ್ತು ತಕ್ಷಣ ರಾಜೀನಾಮೆ ನೀಡಬೇಕೆಂದು ಆಗ್ರಹಿಸಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್. ಮನೋಹರ್ ಅವರ ನೇತೃತ್ವದಲ್ಲಿ ಇಂದು ಬಿಜೆಪಿ ರಾಜ್ಯ ಕಚೇರಿಗೆ ಕಾಂಗ್ರೆಸ್ ಕಾರ್ಯಕರ್ತರು ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.**

ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಎಸ್. ಮನೋಹರ್ ಅವರು, ನೀಟ್ ಪರೀಕ್ಷೆಯಲ್ಲಿನ ಅಕ್ರಮಗಳು ದೇಶದ ಶಿಕ್ಷಣ ವ್ಯವಸ್ಥೆಯ ಮೇಲಿನ ವಿಶ್ವಾಸವನ್ನೇ ಕುಸಿತಗೊಳಿಸಿವೆ. ಲಕ್ಷಾಂತರ ವಿದ್ಯಾರ್ಥಿಗಳ ಪರಿಶ್ರಮಕ್ಕೆ ಅನ್ಯಾಯವಾಗಿದ್ದು, ಪ್ರಶ್ನೆಪತ್ರಿಕೆ ಸೋರಿಕೆ ಮತ್ತು ಪರೀಕ್ಷಾ ಅಕ್ರಮಗಳಿಗೆ ಹೊಣೆಗಾರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಬದಲು ಕೇಂದ್ರ ಸರ್ಕಾರ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಯತ್ನಿಸುತ್ತಿದೆ ಎಂದು ಆರೋಪಿಸಿದರು.



ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ತಮ ಇಲಾಖೆಯ ವೈಲ್ಯಕ್ಕೆ ನೈತಿಕ ಹೊಣೆ ಹೊತ್ತು ಕೂಡಲೇ ರಾಜೀನಾಮೆ ನೀಡಬೇಕು. ನೀಟ್ ಅಕ್ರಮಗಳ ಕುರಿತು ಸಮಗ್ರ ಮತ್ತು ಪಾರದರ್ಶಕ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಶಿಕ್ಷಿಸಬೇಕು ಹಾಗೂ ದೇಶದ ವಿದ್ಯಾರ್ಥಿಗಳ ಭವಿಷ್ಯವನ್ನು ರಕ್ಷಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ತುರ್ತು ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದರು.

ಬಿಜೆಪಿ ಕಚೇರಿಯತ್ತ ಮೆರವಣಿಗೆ ನಡೆಸಿದ ಪ್ರತಿಭಟನಾಕಾರರನ್ನು ಪೊಲೀಸರು ಬ್ಯಾರಿಕೇಡ್‌ಗಳ ಮೂಲಕ ತಡೆದರು. ಈ ವೇಳೆ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದ ಹಲವಾರು ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು.

ಪ್ರತಿಭಟನೆಯಲ್ಲಿ ರಾಜಾಜಿನಗರ ಬ್ಲಾಕ್ ಅಧ್ಯಕ್ಷರಾದ ನಾಗರಾಜ್, ಮುರುಳಿ, ಕೆ.ಟಿ ನವೀನ್ ಚಂದ್ರಶೇಖರ್ , ರೋಹಿತ್ ಕೆ.ಟಿ ನವೀನ್ , ಪ್ರಕಾಶ್, ಆದಿತ್ಯ ಪುಟ್ಟರಾಜು, ಕುಶಾಲ್ ಹರವೇಗೌಡ, ಮಾಧವಹನೂರು, ಕಿಶೋರ್,ಪ್ರವೀಣ್ ರಾವ್ ಒಬಳೇಶ್ , ಪವನ್ , ಉಮಾ, ವೀಣಾ ಮಂಜುನಾಥ್ ಕಾಂಗ್ರೆಸ್ ಮುಖಂಡರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಪಾಲ್ಗೊಂಡಿದ್ದರು.

## ರೈತರ ಹುತಾತ್ಮ ದಿನ ಗಿಡ ನೆಡುವ ಮೂಲಕ ಪರಿಸರ ಸಂರಕ್ಷಣೆಗೆ ಸಂದೇಶ

❑ ನೈಜ್ಯ ದೆಸೆ ನ್ಯೂಸ್

**ಕುಷ್ಟಗಿ: ರೈತರ ಹುತಾತ್ಮ ದಿನದ ಅಂಗವಾಗಿ ಬಿ.ಎನ್. ಪಾಟೀಲ ಕಾಂಪ್ಲೆಕ್ಸ್ ವರ್ತಕರ ವತಿಯಿಂದ ಗಿಡ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಮೂಲಕ ಪರಿಸರ ಸಂರಕ್ಷಣೆಯ ಸಂದೇಶ ಸಾರಲಾಯಿತು.**



ಕಾರ್ಯಕ್ರಮದಲ್ಲಿ ಮಾತನಾಡಿದ ಗಣೇಶ ಪತ್ತಾರ, ಪರಿಸರ ನಾಶವಾಗುತ್ತಿರುವ ಪರಿಣಾಮ ಈ ವರ್ಷ ಮಳೆಯ ಕೊರತೆ ಎದುರಾಗಿದೆ. ನಾವು ಮರಗಳನ್ನು ಕಡಿದು ಪ್ರಕೃತಿಗೆ ಹಾನಿ ಮಾಡುತ್ತಿದ್ದೇವೆ. ಆದರೆ ಹೊಸ ಗಿಡಗಳನ್ನು ನೆಟ್ಟು ಬೆಳೆಸುವ ಜವಾಬ್ದಾರಿಯನ್ನು ಮರೆತಿದ್ದೇವೆ. ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಕರ್ತವ್ಯವಾಗಿದ್ದು, ವಿಶೇಷವಾಗಿ ಯುವಕರು ಗಿಡ ನೆಡುವ ಹಾಗೂ ಅವುಗಳನ್ನು ಪೋಷಿಸುವ ಕಾರ್ಯದಲ್ಲಿ ಮುಂಚೂಣಿಯಲ್ಲಿರಬೇಕು ಎಂದು ಕರೆ ನೀಡಿದರು. ಈ ಸಂದರ್ಭದಲ್ಲಿ ರಾಘವೇಂದ್ರ ರೇವಡಿ, ವೀರನಗೌಡ ಪಾಟೀಲ, ಶಶಿಧರಸ್ವಾಮಿ ಅರಳಲಿಮಠ, ಆಂಜನೇಯ ರೇವಡಿ, ಎಂ.ಡಿ. ಮೌಲಾ, ಜಿ.ಕೆ. ವೆಂಕಟೇಶ, ನಿಂಗಪ್ಪ ವಿ. ಜಿಗೇರಿ ಉಳಿಯಪ್ಪ ಹಡಪದ ಸೇರಿದಂತೆ ಬಿ.ಎನ್. ಪಾಟೀಲ ಕಾಂಪ್ಲೆಕ್ಸ್‌ನ ವರ್ತಕರು ಉಪಸ್ಥಿತರಿದ್ದರು.

# ವಿದ್ಯಾರ್ಥಿಗಳಿಗೆ ವಿವೇಕದ ಪಥ ಮತ್ತು ಯುವ ಸಮ್ಮೇಳನ, ಪುಸ್ತಕ ವಿತರಣೆ

❑ ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಪಟ್ಟಣದ ಶ್ರೀ ಭ್ರಮರಾಂಬ ದೇವಸ್ಥಾನದಲ್ಲಿ ರಾಮಕೃಷ್ಣ ವಿವೇಕಾನಂದ ಆಶ್ರಮ, ಸಿಂಧನೂರು ಹಾಗೂ ಯುವ ಬ್ರಿಗೇಡ್ ಮಸ್ಕಿ ಇವರ ಸಂಯುಕ್ತ ಆಶ್ರಯದಲ್ಲಿ ವಿದ್ಯಾರ್ಥಿಗಳಿಗಾಗಿ "ವಿವೇಕ ಪಥ" ಪುಸ್ತಕ ವಿತರಣೆ ಹಾಗೂ ಯುವ ಸಮ್ಮೇಳನ ಕಾರ್ಯಕ್ರಮ ನಡೆಯಿತು.**

ಸಾನಿಧ್ಯವನ್ನು ಶ್ರೀ ವರ ರುದ್ರಮುನಿ ಶಿವಾಚಾರ್ಯ ಮಹಾಸ್ವಾಮಿಗಳು ಗಚ್ಚಿನಮಠ, ಅಧ್ಯಕ್ಷತೆಯನ್ನು ಶ್ರೀ ಸ್ವಾಮಿ ಸದಾನಂದ ಮಹಾರಾಜ್ ಅಧ್ಯಕ್ಷರು, ರಾಮಕೃಷ್ಣ ವಿವೇಕಾನಂದ ಆಶ್ರಮ, ಸಿಂಧನೂರು , ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಡಾ. ಮಲ್ಲಿಕಾರ್ಜುನ ಇತ್ಲಿ , ಮುಖ್ಯ ಉಪನ್ಯಾಸಕರಾಗಿ ಶ್ರೀ ವಿಲಾಸ್ ಕುಮಾರ್ ದೇಸಾಯಿ, ಸಂಸ್ಥಾಪಕರು-ನಿರ್ದೇಶಕರು, ಹಿಂದುಸ್ತಾನ ಯಾತ್ರಾ ಹಾಗೂ ರಾಜ್ಯ ಪ್ರಶಸ್ತಿ ಪುರಸ್ಕೃತರು, ಹುಬ್ಬಳ್ಳಿ ಭಾಗವಹಿಸಿದ್ದರು.



ವಿಶೇಷ ಉಪನ್ಯಾಸಕರಾಗಿ ಖ್ಯಾತ ವಾಗ್ಮಿ ಶ್ರೀ ರಮೇಶ್ ಉಮರಾಣಿ ಬೆಂಗಳೂರ ಮಾತನಾಡಿ ವಿದ್ಯಾರ್ಥಿಗಳು ಜೀವನದಲ್ಲಿ ಸ್ಪಷ್ಟ ಗುರಿ ಹೊಂದಿ,ಆತ್ಮವಿಶ್ವಾಸ ಬೆಳಸಿಕೊಳ್ಳಬೇಕು,ನಿರಂತರ ಓದು,ಶಿಸ್ತು ಭವಿಷ್ಯದಲ್ಲಿ ಉನ್ನತವಾದ ಹುದ್ದೆ ಹೊಂದಬಹುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಯುವ ಬ್ರಿಗೇಡ್‌ನ ಸಂಚಾಲಕರಾದ ಅಶೋಕ್ ಬೆಳಗಲ್, ದೇವರಾಜ್ ಬಳಗನೂರು, ಯಮನೂರ ಕನ್ನಾರಿ, ಅಮರೇಶ್ ನಾಗಲಿಕರ, ಅಮರೇಶ ಹರಸೂರ, ಅಂಬು ಬೆಳಗಲ್, ವೀರೇಶ್ ನಾಗಲಿಕಾರ್, ರಾಘವೇಂದ್ರ ಮಸ್ಕಿ , ವೀರೇಶ್ ಮಸ್ಕಿ ಸೇರಿದಂತೆ ಶಾಲಾ-ಕಾಲೇಜಿನ ವಿದ್ಯಾರ್ಥಿಗಳು, ಉಪನ್ಯಾಸಕರು, ಪ್ರಾಚಾರ್ಯರು, ಊರಿನ ಹಿರಿಯರು ಹಾಗೂ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

## ಜನರ ಗಮನ ಸೆಳೆದ ಗ್ರಾಮೀಣ ಮೂಲ ಸೌಕರ್ಯ ಚಿತ್ರಣ

❑ ನೈಜ್ಯ ದೆಸೆ ನ್ಯೂಸ್

**ಕವಿತಾಳ: ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ. ಕೃಷಿ ಮಹಾವಿದ್ಯಾಲಯದ ಬಿ.ಎಸ್ಸಿ ಅಂತಿಮ ವರ್ಷದ ವಿದ್ಯಾಥಿಗಳ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಭಿರದ ಅಂಗವಾಗಿ ಸಮೀಪದ ವಟಗಲ್ ಗ್ರಾಮದಲ್ಲಿ ಮೌಲ್ಯಮಾಪನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.**

ವಿದ್ಯಾರ್ಥಿಗಳು ಹಳ್ಳಿಗಳ ಮೂಲ ಸೌಕರ್ಯಗಳಾದ ಶಾಲೆ, ಅಂಗನವಾಡಿ, ಆಸ್ಪತ್ರೆ, ದೇವಸ್ಥಾನ ನೈಸರ್ಗಿಕ ಸಂಪನ್ಮೂಲಗಳು ಹಾಗೂ ಪಾರಂಪರಿಕ, ಸಾಂಪ್ರದಾಯಿಕ ಕೃಷಿ ಪದ್ಧತಿಗಳ ಕುರಿತು ರೈತರೊಂದಿಗೆ ಸಂವಾದ ನಡೆಸಿದ ವಿದ್ಯಾರ್ಥಿಗಳು ಪ್ರಾತ್ಯಕ್ಷಿಕೆ ಮೂಲಕ ತಾವು ಮಾಡಿರುವ ಹಳ್ಳಯ ಚಿತ್ರಣ ಕುರಿತು ಮಾಹಿತಿಯನ್ನು ನೀಡಿದರು. ನಂತರ ಉಪನ್ಯಾಸಕ ಮನೋಜ್ ಪ್ರಾತ್ಯಕಿಕೆ ಕುರಿತು ಮಾತನಾಡಿ 'ಕೃಷಿ ಚಟುವಟಿಕೆ, ಗ್ರಾಮೀಣ ಭಾಗದ ಮೂಲ ಸೌಕರ್ಯಗಳು ಮತ್ತು ಹಳ್ಳಿಗಳಲ್ಲಿನ ಜನರ ಜೀವನಕುರಿತು ಶಾಲಾ ವಿದ್ಯಾರ್ಥಿಗಳು ಹಾಗೂ ಸ್ಥಳಿಯರಿಗೆ ಮಾಹಿತಿ ನೀಡುವ ನಿಟ್ಟಿನಲ್ಲಿ ಕೃಷಿ ವಿಶ್ವ ವಿದ್ಯಾಲಯದ ವಿದ್ಯಾರ್ಥಿಗಳು ಮಾಡಿದ ಚಿತ್ರಣ ಸಾರ್ವಜನಿಕರ ಗಮನ ಸಳೆದಿದ್ದು ವಿದ್ಯಾರ್ಥಿಗಳ ಕಾರ್ಯಕ್ಷಮತೆ ಮೆಚ್ಚುವಂತದ್ದು' ಎಂದರು.



## ಜೋಳ ಖರೀದಿ ಹಣ ಶೀಘ್ರ ಬಿಡುಗಡೆಗೆ ಬಿಜೆಪಿ ಧರಣಿ"

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಬೆಂಬಲ ಬೆಲೆ ಯೋಜನೆಯಡಿ (MSP) ಸರ್ಕಾರಕ್ಕೆ ಮಾರಾಟ ಮಾಡಿದ ಜೋಳದ ಹಣವು 5 ತಿಂಗಳುಗಳಿಂದ ರೈತರ ಖಾತೆಗೆ ಜಮೆಯಾಗಿಲ್ಲ. ಈ ಬಾಕಿ ಮೊತ್ತವನ್ನು ತಕ್ಷಣವೇ ಸಂಪೂರ್ಣವಾಗಿ ಬಿಡುಗಡೆ ಮಾಡಬೇಕು.**

ಭೀಕರ ಬರಗಾಲದಿಂದಾಗಿ ನಷ್ಟ ಅನುಭವಿಸಿರುವ ರೈತರಿಗೆ ಸರ್ಕಾರ ಕೋಡಲೆ ಬರ ಪರಿಹಾರ ಧನವನ್ನು ಘೋಷಿಸಣೆ ವಿಳಂಬ ಮಾಡದೇ ತಕ್ಷಣವೇ ಖಾತೆಗೆ ನೇರವಾಗಿ ಜಮೆ (ಆಃಖಿ) ಮಾಡಬೇಕು. ಬ್ಯಾಂಕ್ ಸಾಲ ಮನ್ನಾ/ಸಾಫ್ಟ್ ಲೋನ್: ಬೆಳೆ ನಷ್ಟದಿಂದ ಕಂಗೆಟ್ಟಿರುವ ರೈತರ ಕೃಷಿ ಸಾಲಗಳ ವಸೂಲಾತಿಯನ್ನು ತಡೆಹಿಡಿಯಬೇಕು ಮತ್ತು ಸಾಲ ಮರುಪಾವತಿಗೆ ಕಾಲಾವಕಾಶ ನೀಡಬೇಕು.



ತುಂಗಭದ್ರ ಎಡದಂಡೆ ನಾಲೆಯ ವಿತರಣಾ ಕಾಲುವೆಗಳ ಜಂಗಲ್ ಕಟಿಂಗ್ ಅನ್ನು ಕೂಡಲೇ ಮಾಡಿಸಬೇಕು ಹಾಗೂ ಕಾಲುವೆಯಲ್ಲಿ ತುಂಬಿರುವ ಹೂಳನ್ನು ತೆರವುಗೊಳಿಸಬೇಕು ಎಂದು ಒತ್ತಾಯಿಸಿ ಧರಣಿ ನಡೆಸಲಾಯಿತು.

ಈ ಸಂದರ್ಭದಲ್ಲಿ ಮಾಜಿ ಸಂಸದರಾದ ಬಿ.ವಿ. ನಾಯಕ್, ಮಾಜಿ ಶಾಸಕರಾದ ಬಸನಗೌಡ ಬ್ಯಾಗವಾಟ, ಗಂಗಾಧರ ನಾಯಕ ಹಾಗೂ ಪಕ್ಷದ ತಾಲೂಕು ಅಧ್ಯಕ್ಷರು, ಮುಖಂಡರು, ಪದಾಧಿಕಾರಿಗಳು,ಮಂಡಲದ ಪದಾಧಿಕಾರಿಗಳು, ಜಿಲ್ಲಾ ಪದಾಧಿಕಾರಿಗಳು, ವಿವಿಧ ಮೋರ್ಚಾ ಅಧ್ಯಕ್ಷರು ಉಪಸ್ಥಿತರಿದ್ದರು.

# ಸಿಂಧನೂರು ತಾಲೂಕಿನ ಗಾಂಧಿನಗರದಲ್ಲಿ ಸಮಗ್ರ ಆರೋಗ್ಯ ತಪಾಸಣಾ ಶಿಬಿರ ಯಶಸ್ವಿ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ರಾಜ್, ಕರ್ನಾಟಕ ರಾಜ್ಯ ಏಡ್ಸ್ ನಿಯಂತ್ರಣ ಸಂಸ್ಥೆ ಬೆಂಗಳೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಜಿಲ್ಲಾ ಏಡ್ಸ್ ತಡೆ ಮತ್ತು ನಿಯಂತ್ರಣ ಘಟಕ ರಾಯಚೂರು ತಾಲೂಕ್ ಅರೋಗ್ಯ ಅಧಿಕಾರಿಗಳ ಕಚೇರಿ ಸಿಂಧನೂರ್ ಐಸಿಟಿಸಿ ಕೇಂದ್ರ ಸಿಂಧನೂರ್ ಮೊಬೈಲ್ ಐ ಸಿ ಟಿ ಸಿ ರಾಯಚೂರು ಪ್ರಾಥಮಿಕ ಆರೋಗ್ಯ ಕೇಂದ್ರ ಗಾಂಧಿನಗರ ಗ್ರಾಮ ಪಂಚಾಯಿತಿ ಗಾಂಧಿನಗರ ಹೊಸಬೆಳಕು ಹೇಲ್ಟೆಜೆ ಇಂಡಿಯಾ,**

ಸೆಂಟಲೂಕ್ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಯುಕ್ತಾಶ್ರಯದಲ್ಲಿ ಇಂದು ಸಮಗ್ರ ಆರೋಗ್ಯ ತಪಷಣೆ ಶಿಬಿರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು ಸದರಿ ಕಾರ್ಯಕ್ರಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆಯುಷ್ ವೈದ್ಯಾಧಿಕಾರಿಗಳಾಗಿರುವಂತ ಡಾ. ಸೀಮಾ ಇವರು ಮಾತನಾಡಿ ನಮ್ಮ ಪ್ರಾಥ-'ಮಿಕ ಆರೋಗ್ಯ ಕೇಂದ್ರದಲ್ಲಿ ಉಚಿತ ಸಮಗ್ರತ ಆರೋಗ್ಯ ತಪಾಷಣ ಶಿಬಿರ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಈ ಕಾರ್ಯಕ್ರಮದಲ್ಲಿ ಆರೋಗ್ಯತಪಾಷಣ ಸದುಪಯೋಗವನ್ನು ಗ್ರಾಮದ ಎಲ್ಲಾ ಹಿರಿಯ ನಾಗರಿಕರು ಸದುಪಯೋಗ ಪಡೆದುಕೊಳ್ಳಬೇಕು ಮತ್ತು ಆರೋಗ್ಯವನ್ನು ತಪಾಸಣೆ ಮಾಡಿಸಿಕೊಳ್ಳಬೇಕು ಟಿಬಿ, ಮಧುಮೇಹ, ಬಿಪಿ ಇತ್ಯಾದಿ ಕಾಯಿಲೆಗಳನ್ನು ಪರೀಕ್ಷಿಸಿಕೊಳ್ಳಬೇಕು ಎಂದು ಹೇಳಿದರು ಶ್ರೀಮತಿ ಗೀತಾ ಹಿರೇಮಠ್ ಇವರು ಮಾತನಾಡಿ ಪ್ರತಿ ವರ್ಷ 30 ವಯಸ್ಸಿನ ಮೇಲ್ಪಟ್ಟು ಎಲ್ಲಾ ಸಾರ್ವಜನಿಕರು ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು ಮದುಮೇಹ ದೇಹದ ರಕ್ತದಲ್ಲಿನ ಗ್ಲುಕೋಸ್ ಅಥವಾ ಸಕ್ಕರೆಯ ಅಂಶ ಹೆಚ್ಚಿನ ಪ್ರಮಾಣದಲ್ಲಿರುವುದನ್ನು ಸಕ್ಕರೆ ಕಾಯಿಲೆ ಎನ್ನುತೇವೆ ಮಧುಮೇಹ ಚಿಕಿತ್ಸೆ ನೀಡದಿದ್ದಲ್ಲಿ ಇದರಿಂದ ಹೃದಯಕ್ಕೆ ಸಂಬಂಧಪಟ್ಟ ಕಾಯಿಲೆಗಳು,ಮೂತ್ರಪಿಂಡದ ಕಾಯಿಲೆಗೆ ತುತ್ತಾಗಬೇಕುತ್ತದೆ ಅದರಿಂದ ತಪಾಷಣೆ ಕಳಕಾಲಕ್ಕೆ ಪಡೆದುಕೊಳ್ಳಬೇಕು,




ಇದು ಕ್ಷಯ ರೋಗದ ಲಕ್ಷಣಗಳು ಸದರಿ ಶಿಬಿರದಲ್ಲಿ ಎಚ್‌ಐವಿ ತಪಾಸಣೆಯನ್ನು ಸಮುದಾಯ ಮಟ್ಟದಲ್ಲಿ ಮಾಡಲಾಯಿತು ಮತ್ತು ಅದರ ಬಗ್ಗೆ ಆರೋಗ್ಯ ಶಿಕ್ಷಣ ನೀಡಲಾಯಿತು. ಈ ಸಂದರ್ಭದಲ್ಲಿ, ಮಲ್ಲಯ್ಯ ಮಠಪತಿ ಜಿಲ್ಲಾ ಮೇಲ್ವಿಚಾರಕರು, ಹೇಲಟ್ಜೆ ಇಂಡಿಂ-ಯಾ ವ್ಯವಸ್ಥಾಪಕರು ಹಾಗೂ ವೈದ್ಯಾಧಿಕಾ-ರಿಗಳು ಮತ್ತು ಅವರ ತಂಡ, ಯಮನೂರ ,ಇ, ಓಂ ಪ್ರಕಾಶ್ ಮತ್ತು ಐಸಿಟಿಸಿ ತಂಡ, ಪ್ರಾಥ-'ಮಿಕ ಆರೋಗ್ಯ ಕೇಂದ್ರದ ಗಾಂಧಿನಗರ ಸಂಧ್ಯಾ ರಾಧಾ ಮತ್ತು ಆಶಾ ಕಾರ್ಯಕರ್ತೆಯರು,ವಿವಿಧ ಕಾರ್ಯಕ್ರಮದ ಎನ್‌ಜಿಓ ಸಿಬ್ಬಂದಿಗಳು ಸಾರ್ವಜನಿಕರು ಉಪಸ್ಥಿತರಿದ್ದರು.

## ಸಾಹಿತ್ಯ ಸಿಂಚನ

### ನಿವೇದನೆ..!

ಕನಸಲ್ಲಿ ಬಂದರೂ..
ಕಾಡಲಾರೆ ಚಿನ್ನ..!
ಇರುಳೆಲ್ಲ..........
ಕಣ್ರೆಪ್ಪೆಗಳಲ್ಲೆ ಕುಳಿತು
ಕಾಯುವೆನು ನಿನ್ನ..!!

ಎದುರಲ್ಲಿ ಬಂದರೂ
ಬೇಡಲಾರೆ ನಿನ್ನ..!
ಜೀವಿತವೆಲ್ಲ...........
ಎದೆಬಾಗಿಲಲ್ಲೆ ನಿಂತು
ಕಾಯುವೆನು ಚಿನ್ನ..!!

ನೂರು ನೋವಿದ್ದರೂ
ಹೇಳಲಾರೆ ಚಿನ್ನ.!
ಸಹಿಸುತ ಎಲ್ಲ.....
ನಿತ್ಯ ನಗು ನಗುತ
ಬೆರೆಯುವೆನು ನಿನ್ನ.!

ಸಾವಿರ ಸೋಲಾದರೂ
ಬಿಡಲಾರೆನು ನಿನ್ನ.!
ಮರೆಯುತ ಎಲ್ಲ.......
ನಿನ್ನನು ಗೆಲ್ಲಿಸುತ
ಮೆರೆಯುವೆನು ಚಿನ್ನ.!

ಸಾಲು ಸವಾಲಿದ್ದರೂ
ಹಳಿಯಲಾರೆ ನಿನ್ನ.!
ಮೀರುತ ಅವನೆಲ್ಲ
ಉಲ್ಲಾಸದಿ ನಡೆಯುತ
ಜೊತೆಯಾಗುವೆ ನಿನ್ನ.!

ಕೋಟಿ ಕಷ್ಟಗಳಿದ್ದರೂ
ದೂರಲಾರೆ ನಿನ್ನ.!
ಎದುರಿಸುತ ಸಕಲ........
ನಿನ್ನ ಅನವರತ
ಪೊರೆಯುವೆನು ಚಿನ್ನ.!

ಎ.ಎನ್.ರಮೇಶ್. ಗುಬ್ಬಿ

## ದೇವದುರ್ಗ ಹಜರತ್ ಜಾಹೀರುದ್ದೀನ್ ಪಾಶ ಖಾದ್ರಿ ವೃತ್ತದಲ್ಲಿ ಫ್ಲಡ್ ಲೈಟ್ ದುರಸ್ತಿ, ರಸ್ತೆ ಗುಂಡಿ ಮುಚ್ಚಲು AIMIM ಆಗ್ರಹ

❑ ನೈಜ್ಯ ದೆಸೆ ನ್ಯೂಸ್

**ದೇವದುರ್ಗ: ಪಟ್ಟಣದ ಪ್ರಮುಖ ಹಜರತ್ ಜಾಹೀರುದ್ದೀನ್ ಪಾಶ ಖಾದ್ರಿ (ರ.ಅ.) ವೃತ್ತದಲ್ಲಿ ಹಾಳಾಗಿರುವ ಫ್ಲಡ್ ಲೈಟ್‌ಗಳನ್ನು ದುರಸ್ತಿಗೊಳಿಸಿ, ಶಹಪುರ ರಸ್ತೆಯಲ್ಲಿರುವ ಬೃಹತ್ ಗುಂಡಿಗಳನ್ನು ತಕ್ಷಣವೇ ಮುಚ್ಚುವಂತೆ ಆಗ್ರಹಿಸಿ ಆಲ್ ಇಂಡಿಂ–ಯಾ ಮಜ್ಲಿಸ್–ಎ–ಇತ್ತೇಹಾದುಲ್–ಮುಸ್ಲಿಮೀನ್ (AIMIM) ವತಿಯಿಂದ ಲೋಕೋಪಯೋಗಿ ಇಲಾಖೆಗೆ ಮನವಿ ಸಲ್ಲಿಸಲಾಯಿತು.**

AIMIM ರಾಯಚೂರು ನಗರ ಅಧ್ಯಕ್ಷ ಶಬ್ಬೀರ್ ಅಹ್ಮದ್ ಹೌದೋಡ್ಡಿ ಅವರ ನೇತೃತ್ವದಲ್ಲಿ ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರಿಗೆ ಮನವಿ ಸಲ್ಲಿಸಲಾಯಿತು. ಪಟ್ಟಣದ ಪ್ರಮುಖ ವೃತ್ತದಲ್ಲಿ ಕಳೆದ ಹಲವು ವರ್ಷಗಳಿಂದ ಅಳವಡಿಸಲಾಗಿರುವ ಫ್ಲಡ್ ಲೈಟ್‌ಗಳು ಸೂಕ್ತ ನಿರ್ವಹಣೆಯಿಲ್ಲದೆ



ಕಾರ್ಯನಿರ್ವಹಿಸದೆ ಹಾಳಾಗಿವೆ. ಇದ–ರಿಂದ ರಾತ್ರಿ ವೇಳೆಯಲ್ಲಿ ವೃತ್ತವು ಕತ್ತಲಿನಲ್ಲಿ ಮುಳುಗುತ್ತಿದ್ದು, ಸಾರ್ವಜನಿಕರು ಹಾಗೂ ವಾಹನ ಸವಾರರಿಗೆ ತೀವ್ರ ತೊಂದರೆಯಾಗುತ್ತಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಇದಲ್ಲದೆ, ದೇವದುರ್ಗದಿಂದ ಶಹಪುರ ಹೋಗುವ ಪ್ರಮುಖ ರಸ್ತೆ ಹಾಗೂ ಇತರ ಜಿಲ್ಲೆಗಳು ಮತ್ತು ಹೊರರಾಜ್ಯಗಳಿಗೆ ಸಂಪರ್ಕ ಕಲ್ಪಿಸುವ ಪ್ರಮುಖ ಹೆದ್ದಾರಿ ರಸ್ತೆಯಲ್ಲಿ ಬೃಹತ್ ಗುಂಡಿಗಳು ಬಿದ್ದಿದ್ದು, ವಾಹನ ಸವಾರರು ಅಪಾಯಕರ ಪರಿಸ್ಥಿತಿಯಲ್ಲಿ ಸಂಚರಿಸುವಂತಾಗಿದೆ. ಬೆಳಕಿನ ಕೊರತೆ ಹಾಗೂ ರಸ್ತೆ ಗುಂಡಿಗಳಿಂದಾಗಿ ರಾತ್ರಿ ವೇಳೆಯಲ್ಲಿ ಅಪಘಾತಗಳ ಭೀತಿ ಹೆಚ್ಚಾಗಿದೆ ಎಂದು AIM-IM ಮುಖಂಡರು ಆತಂಕ ವ್ಯಕ್ತಪಡಿಸಿದ್ದಾರೆ.

ಆಗಸ್ಟ್ 11, 2026ರಂದು ನಡೆಯಲಿರುವ ಹಜರತ್ ಜಾಹೀರುದ್ದೀನ್ ಪಾಶ ಸಂದಲ್ (ಗಂಧ) ಮಹೋತ್ಸವಕ್ಕೂ ಮುನ್ನ ಶಹಪುರ ರಸ್ತೆಯಲ್ಲಿರುವ ಗುಂಡಿಗಳನ್ನು ಮುಚ್ಚಿ, ಹಜರತ್ ಜಾಹೀರುದ್ದೀನ್ ಪಾಶ ಖಾದ್ರಿ ವೃತ್ತದಲ್ಲಿ ಸಮರ್ಪಕ ಫ್ಲಡ್ ಲೈಟ್ ಹಾಗೂ ವಿದ್ಯುತ್ ದೀಪಗಳ ವ್ಯವಸ್ಥೆ ಕಲ್ಪಿಸಿ ಕಾಮಗಾರಿ ಪೂರ್ಣಗೊಳಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಈ ಸಂದರ್ಭದಲ್ಲಿ ಮೊಹಮ್ಮದ್ ಶರೀಫ್, ರಂಗಯ್ಯ ಅಬಕಾರಿ, ಗೌಸ್ ಮೋಹಿನುದ್ದೀನ್, ಮೆಹಬೂಬ್ ಅಕುರ, ಗುಂಡಪ್ಪ ಕರಿಮರಡಿ, ಫಾರೂಕ್ ಎನ್., ಮೊಹಮ್ಮದ್ ನವಾಜ್, ಮೊಹಮ್ಮದ್ ಆರ್ಷದ್, ಮೊಹಮ್ಮದ್ ಶುಜಾತ್ ಹೌದೋಡ್ಡಿ, ಮೊಹಮ್ಮದ್ ಜುನೈದ್ ಸೇರಿದಂತೆ AIM-IM ಮುಖಂಡರು, ಕಾರ್ಯಕರ್ತರು ಹಾಗೂ ಸ್ಥಳೀಯ ನಾಗರಿಕರು ಉಪಸ್ಥಿತರಿದ್ದರು.

ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

## ಚಿಕ್ಕಲಪರ್ವಿ ಸಹಕಾರ ಸಂಘದಲ್ಲಿ ಗೊಬ್ಬರ ಮಾರಾಟ ಅಕ್ರಮ ಆರೋಪ: ತನಿಖೆಗೆ ಆಗ್ರಹಿಸಿ ಅಧಿಕಾರಿಗಳಿಗೆ ಮನವಿ

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ತಾಲೂಕಿನ ಚಿಕ್ಕಲಪರ್ವಿ ಪ್ರಾಥ–ಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ರೈತರಿಗೆ ಎಂ.ಆರ್.ಪಿ.ಗಿಂತ ಹೆಚ್ಚಿನ ದರಕ್ಕೆ ರಸಗೊಬ್ಬರ ಮಾರಾಟ ಮಾಡುವುದು, ಕಡ್ಡಾಯವಾಗಿ ಇತರೆ ಗೊಬ್ಬರಗಳನ್ನು ಖರೀದಿಸುವಂತೆ ಒತ್ತಾಯಿಸುವುದು ಹಾಗೂ ಸ್ಥಳೀಯ ರೈತರಿಗೆ ನೀಡಬೇಕಾದ ಗೊಬ್ಬರವನ್ನು ಬೇರೆ ಊರಿನವ–ರಿಗೆ ಮಾರಾಟ ಮಾಡುತ್ತಿರುವ ಅಕ್ರಮಗಳನ್ನು ಕೂಡಲೇ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ**




**ತಹಸೀಲ್ದಾರ ಕಚೇರಿ ಹಾಗೂ ಸಹಾಯಕ ಕೃಷಿ ನಿರ್ದೇಶಕರಿಗೆ ದಲಿತ ಸೇನೆ ಅಲ್ಪಸಂಖ್ಯಾತರ ಘಟಕದ ಜಿಲ್ಲಾಧ್ಯಕ್ಷ ತಾಜುದ್ದೀನ್ ಚಿಕ್ಕಲಪರ್ವಿ ನೇತೃತ್ವದಲ್ಲಿ ಮನವಿ ಸಲ್ಲಿಸಲಾಯಿತು.**


ಈ ಸಂದರ್ಭದಲ್ಲಿ ಮಾತನಾಡಿದ ತಾಜುದ್ದೀನ್ ಚಿಕ್ಕಲಪರ್ವಿ, ಸರ್ಕಾರ ನಿಗದಿಪಡಿಸಿರುವ ಎಂ.ಆರ್.ಪಿ. ದರವನ್ನು ಉಲ್ಲಂಘಿಸಿ ರೈತರಿಂದ ಹೆಚ್ಚುವರಿ ಹಣ ವಸೂಲಿ ಮಾಡುತ್ತಿರುವುದು ರೈತರ ಮೇಲಿನ ಬಹಿರಂಗ ಶೋಷಣೆಯಾಗಿದೆ. ರೈತರಿಗೆ ಬೇಡವಾದ ಗೊಬ್ಬರಗಳನ್ನು ಕಡ್ಡಾಯವಾಗಿ ಲಿಂಕ್ ಮಾಡಿ ಮಾರಾಟ ಮಾಡುತ್ತಿರುವುದು ಹಾಗೂ ಸ್ಥಳೀಯ ರೈತರಿಗೆ ಸಿಗಬೇಕಾದ ಗೊಬ್ಬರವನ್ನು ಬೇರೆ ಊರಿನವರಿಗೆ ಮಾರಾಟ ಮಾಡುತ್ತಿರುವ ಆರೋಪಗಳ ಬಗ್ಗೆ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥ ಅಧಿಕಾರಿಗಳು ಮತ್ತು ಸಿಬ್ಬಂದಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಹೆಚ್ಚುವ–ರಿಯಾಗಿ ವಸೂಲಿ ಮಾಡಿದ ಹಣವನ್ನು ರೈತ–ರಿಗೆ ಹಿಂದಿರುಗಿಸಬೇಕು ಎಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ಸಬ್ಜಲಿ ಸಾಬ್, ಮಹಿಬೂಬ್, ಬಸವರಾಜ ಯಡಿವಾಳ, ನಾಗರಾಜ ರಂಗದಾಳ, ಶರಣಪ್ಪ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ಜು. 26 ರಂದು ನೂತನ ದೃಷ್ಠಿ ಕೇಂದ್ರ ಮಾನ್ವಿ ಕಣ್ಣಿನ ಅಸ್ಪತ್ರೆಯ ಪ್ರಾರಂಭೋತ್ಸವ

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಮಾನ್ವಿ ಸಹಕಾರಿ ಬ್ಯಾಂಕ್ ಸಭಾಂಗಣದಲ್ಲಿ ಮಾನ್ವಿ ತಾಲೂಕು ಲಯನ್ಸ್ ಕ್ಲಬ್ ಅಧ್ಯಕ್ಷರಾದ ಲಯನ್ ಎಂ. ನಾಗರಾಜ ಮಾತನಾಡಿ ಪಟ್ಟಣದ ಸಿಂಧನೂರು ರಸ್ತೆಯಲ್ಲಿ ನೂತನ ದೃಷ್ಠಿ ಕೇಂದ್ರ ಮಾನ್ವಿ ಕಣ್ಣಿನ ಅಸ್ಪತ್ರೆಯನ್ನು ಜು. 26 ರಂದು ಬೆಳಿಗ್ಗೆ 10 ಗಂಟೆಗೆ ಮಾಜಿ ಸಚಿವರು ಹಾಗೂ ವಿಧಾನಪರೀಷತ್ ಸದಸ್ಯರಾದ ಎನ್ .ಎಸ್.ಬೋಸರಾಜು ರವರು ಉದ್ಘಾಟಿಸಲಿದ್ದಾರೆ.**

ಜಿಲ್ಲಾ ಅಂಧತ್ವ ನಿವಾರಣಾ ಸಂಸ್ಥೆ,–ಎಂ.ಎಂ.ಜೋಶಿ ನೇತ್ರ ವಿಜ್ಞಾನ ಸಂಸ್ಥೆ,



ಎಸ್.ಜಿ.ಎಮ್.ನೇತ್ರ ಭಂಡಾರ ಸಂಶೋಧನಾ ಪ್ರತಿಷ್ಠಾನ ಹಾಗೂ ಲಯನ್ಸ್ ಕ್ಲಬ್ ಇಂಟ–ರ್ ನ್ಯಾಷನಲ್ ಫೌಂಡೇಷನ್, ಮಾನ್ವಿ ತಾಲೂಕು ಲಯನ್ಸ್ ಕ್ಲಬ್ ವತಿಯಿಂದ ನಡೆಯುವ ಉಚಿತ ನೇತ್ರ ತಪಾಸಣೆ ಮತ್ತು ಶಸ್ತ್ರ ಚಿಕಿತ್ಸೆ ಶಿಬಿರಕ್ಕೆ ಶಾಸಕ ಹಂಪಯ್ಯನಾಯಕ ಚಾಲನೆ ನೀಡಲಿದ್ದಾರೆ.ದಿವ್ಯಸಾನಿಧ್ಯವನ್ನು ಚೀಕಲಪರ್ವಿ ಶ್ರೀ ರುದ್ರಮುನೀಶ್ವರ ಮಠದ ಶ್ರೀ ಸದಾಶಿವ ಮಹಾಸ್ವಾಮಿಗಳು ವಹಿಸಲಿದ್ದಾರೆ.

ಮಾಜಿ ಶಾಸಕರಾದ ಬಸವನಗೌಡ ಬ್ಯಾಗವಾಟ,ಗಂಗಾಧರ ನಾಯಕ,ರಾಜವೆಂಕಟಪ್ಪ ನಾಯಕ, ಎಂ.ಈರಣ್ಣ,ಆರ್.ತಿಮ್ಮಯ್ಯಶೆಟ್ಟಿ, ಡಾ.ಶ್ರೀನೀವಾಸ ಜೋಶಿ, ಕುತುಬುದ್ದಿನ್ ಮುಲ್ಲಾ, ರಾಜ್ಯ ಲಯನ್ಸ್ ಕ್ಲಬ್ ಇಂಟ–ರ್ ನ್ಯಾಷನಲ್ ಫೌಂಡೇಷನ್ ವಿಜನ್ ವಿಭಾಗದ ಜಿಲ್ಲಾ ಅಧ್ಯಕ್ಷರಾದ ನೀತಿನ್ ಜೈನ್, ಡಾ.ಮಲ್ಲಿಕಾರ್ಜುನ ಇತ್ತಿ, ಬಿ.ಸಿ.ಶೆಟ್ಟಿ, ಆರ್. ಮುತ್ತುರಾಜ್ ಶೆಟ್ಟಿ, ಅಕ್ಬರ್ ಸಾಬ್,ಬಿ.ವೆಂಕಟ–ರೆಡ್ಡಿ,ಗೀರಿ ಪಾಟೀಲ್, ಅಬ್ದುಲ್ ಗಫೂರ್ ಸಾಬ್, ಸೇರಿದಂತೆ ಅನೇಕ ಮುಖಂಡರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಮಾನ್ವಿ ತಾಲೂಕು ಲಯನ್ಸ್ ಕ್ಲಬ್ ಕಾರ್ಯದರ್ಶಿ ಬಿ.ಶಾಂತಮೂರ್ತಿ, ಕೋಶಾಧ್ಯಕ್ಷರಾದ ಪಿ.ರಾಮರಾಜು,ಡಾ.ಈರಣ್ಣ ಮರ್ಲಟ್ಟಿ, ರಾಮಲಿಂಗಪ್ಪ. ಮುದ್ದುರಂಗಪ್ಪ ಮುತ್ತಾಲಿಕ್, ಸೇರಿದಂತೆ ಇನ್ನಿತರರು ಇದ್ದರು.

## ಹೊಯ್ಸಳ, ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿಗೆ ಅರ್ಜಿ ಆಹ್ವಾನ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು ಜುಲೈ 22 (ಕರ್ನಾಟಕ ವಾರ್ತೆ): ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ಮಕ್ಕಳ ದಿನಾಚರಣೆ–2026ರ ಪ್ರಯುಕ್ತ ಮಕ್ಕಳು ತಮ್ಮ ಪ್ರಾಣದ ಹಂಗನ್ನು ತೊರೆದು ಹಾಗೂ ಸಮಯ ಪ್ರಜ್ಞೆಯಿಂದಿ ಇತರರ ಪ್ರಾಣದ ರಕ್ಷಣೆಗಾಗಿ ಧೈರ್ಯ ಸಾಹಸ ಪ್ರದರ್ಶಿಸಿದ 6 ರಿಂದ 18 ವರ್ಷದೊಳಗಿನ ಬಾಲಕರಿಗೆ ಹೊಯ್ಸಳ ಮತ್ತು ಬಾಲಕಿಂ–ಯರಿಗೆ ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.**




ತಮ್ಮ ಪ್ರಾಣದ ಹಂಗನ್ನು ತೊರೆದು ಹಾಗೂ ಸಮಯ ಪ್ರಜ್ಞೆಯಿಂದಿ ಇತರರ ಪ್ರಾಣದ ರಕ್ಷಣೆಗಾಗಿ ಧೈರ್ಯ ಸಾಹಸ ಪ್ರದರ್ಶಿಸಿದ 6 ರಿಂದ 18 ವರ್ಷದೊಳಗಿನ ಬಾಲಕರಿಗೆ ಹೊಯ್ಸಳ ಮತ್ತು ಬಾಲಕಿಯರಿಗೆ ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿಯನ್ನು ಪ್ರಧಾನ ಮಾಡಲಾಗುತ್ತದೆ. ಪ್ರಕರಣವು 01–08–2025 ರಿಂದ01–07–2026ರೊಳಗೆ ನಡೆದಿರಬೇಕು. ಪ್ರಶಸ್ತಿಗೆ ಆಯ್ಕೆಯಾದ ಮಕ್ಕಳಿಗೆ ತಲಾ 10,000 ರೂ.ಗಳ ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ ಒಳಗೊಂಡಿರುತ್ತದೆ. ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಕನಿಷ್ಠ 05 ವರ್ಷಗಳ ಕಾಲ ಅತ್ಯುತ್ತಮ ಸೇವೆ ಸಲ್ಲಿಸಿರುವ ವ್ಯಕ್ತಿಗಳಿಗೆ ತಲಾ 25,000 ರೂ. ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ ಹಾಗೂ ಸಂಸ್ಥೆಗಳಿಗೆ ತಲಾ 1,00,000 ರೂ. ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರವನ್ನು ನೀಡಿ ಗೌರವಿಸಲಾಗುವುದು. ಆಸಕ್ತರು ಆಗಸ್ಟ್ 15ರೊಳಗಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾ–ರಿಗಳು ಉಪ ನಿರ್ದೇಶಕರ ಕಚೇರಿ ಮಂತ್ರಾಲಯ ರೋಡ್ ಐ.ಡಿ.ಎಸ್. ಎಮ್.ಟಿಲೇಔಟ್ ಎದುರುಗಡೆ ರಾಯಚೂರು ಇವರನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿದ್ಯಾರ್ಥಿಗಳ ಶಾಂತಿಯುತ ಹೋರಾಟಕ್ಕೆ ಕೇಂದ್ರ ಸರ್ಕಾರದಿಂದ ದಾಳಿ ಖಂಡನೆ: ಹುಸೇನ್ ಸಾಬ್

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಕೇಂದ್ರ ಸರ್ಕಾರ ತನ್ನ ಸಂವಿಧಾನ ಬದ್ದ ಮತ್ತು ನೈತಿಕ ಜವಾಬ್ದಾ–ರಿಗಳನ್ನ ಸಮರ್ಪಕವಾಗಿ ನಿರ್ವಹಿಸುವಲ್ಲಿ ವಿಫಲವಾಗಿದೆ ಎಂದು ಜಮಾಅತೆ ಹಿಸ್ಲಾಮಿ ಹಿಂದ್ ತಾಲೂಕು ಅಧ್ಯಕ್ಷ ಹುಸೇನ್ ಸಾಬ್ ಕೇಂದ್ರ ಸರ್ಕಾರದ ವಿರುದ್ದ ವಾಗ್ದಾಳಿ ನಡೆಸಿದರು.**

ಸಾಲಿಡಾರಿಟಿ ಯೂತ್ ಮೂವ್ಮೆಂಟ್, ಸ್ಟೂಡೆಂಟ್ಸ್ ಇಸ್ಲಾಮಿಕ್ ಆರ್ಗನೈಸೇಶನ್, ಗರ್ಲ್ಸ್ ಇಸ್ಲಾಮಿಕ್ ಆರ್ಗನೈಸೇಶನ್, ಹಾಗೂ ತಾಲೂಕು ಜಮಾಅತೆ ಇಸ್ಲಾಮಿ ಹಿಂದ್ ಇವರ ಸಂಯುಕ್ತಾಶ್ರಯದಲ್ಲಿ ಜು.22 ಬುಧವಾರದಂದು ನಗರದ ತಹಶೀಲ್ದಾರ್ ಕಚೇರಿಯ ಆವರಣದಲ್ಲಿ ನೀಟ್ ಪರೀಕ್ಷೆಯ ಅಕ್ರಮ, ಪ್ರತಿಭಟನೆ ನಿರತ ವಿದ್ಯಾರ್ಥಿಗಳ ಮೇಲಿನ ಹಲ್ಲೆಯನ್ನು ಖಂಡಿಸಿ, ವಿದ್ಯಾರ್ಥಿಗಳಿಗೆ ನ್ಯಾಯ ದೊರಕಿಸಿ ಕೊಡುವಂತೆ ಆಗ್ರಹಿಸಿ ಪ್ರತಿಭಟನೆ ಮಾಡಿದರು.

ನಂತರ ಬಸವರಾಜ ಬಾದರ್ಲಿ ಮಾತನಾಡಿ, ನೀಟ್ ಪ್ರಶ್ನೆ ಪತ್ರಿಕೆ ಸೋ–ರಿಕೆಯಿಂದಾಗಿ 26 ವಿದ್ಯಾರ್ಥಿಗಳು ಆತ್ಮಹತ್ಯೆಗೆ ಶರಣಾಗಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ ನಡೆದ ಅಕ್ರಮಗಳಿಂದ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯ ಆತಂಕಕ್ಕೆ ಸಿಲುಕಿದೆ. ಇಂತಹ ನಿರ್ಲಕ್ಷ್ಯದಿಂದಾಗಿ



ವಿದ್ಯಾರ್ಥಿಗಳು ಮಾನಸಿಕವಾಗಿ ಕುಗ್ಗುವಂತಹ ಪರಿಸ್ಥಿತಿ ನಿರ್ವಾಣವಾಗಿದ್ದು, ಸರ್ಕಾರ ವಿದ್ಯಾರ್ಥಿಗಳ ಧ್ವನಿಗೆ ನ್ಯಾಯ ಒದಗಿಸಬೇಕೆಂದು ಒತ್ತಾಯಿಸಿದರು.

ದೆಹಲಿಯ ಜಂತರ್–ಮಂತರ್ ನಲ್ಲಿ ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದ ವಿದ್ಯಾರ್ಥಿಗಳ ಮೇಲೆ ದಾಳಿ ನಡೆಸಿದ್ದನ್ನು ವಿರೋಧಿಸಿ, ಸೋನಂ ವಾಂಗ್ಚುಕ್ ಅವರ ಬೇಡಿಕೆಗಳನ್ನು ನಿರ್ಲಕ್ಷಿಸಿ, ಸರ್ಕಾರ ಆಶಯಗಳಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿದೆ. ಪರೀಕ್ಷೆಯಲ್ಲಿನ ಅಕ್ರಮಗಳಿಂದ ದೇಶದ ವಿದ್ಯಾರ್ಥಿಗಳು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದು, ಈ ಹಿನ್ನೆಲೆಯಲ್ಲಿ ಜೀವ ಕಳೆದುಕೊಂಡ ವಿದ್ಯಾರ್ಥಿಗಳ ಕುಟುಂಬಗಳಿಗೆ ತಲಾ 1 ಕೋಟಿ ಪರಿಹಾರ ನೀಡಬೇಕೆಂದು ಆಗ್ರಹಿಸಿ, ಅಕ್ರಮಕ್ಕೆ ಕಾರಣವಾದವರ ವಿರುದ್ಧ ಸೂಕ್ತ ಕಠಿಣ ಕಾನೂನು ಕ್ರಮ ಕೈಗೊಂಡು ಪಾರದರ್ಶಕ ಪರೀಕ್ಷಾ ವ್ಯವಸ್ಥೆಯನ್ನು ಜಾ–ರಿಗೊಳಿಸಬೇಕು. ಆಕ್ರಮಗಳಿಗೆ ಕಾರಣ–ರಾದವರ ವಿರುದ್ಧ ಕಾನೂನು ಕ್ರಮ ಕೈಗೊಂಡು ಪಾರದರ್ಶಕ ಪರೀಕ್ಷಾ ವ್ಯವಸ್ಥೆ ಜಾರಿಗೊಳಿಸುವಂತೆ ಒತ್ತಾಯಿಸಿದರು.

ನಗರದ ಅನ್ವಿತ ಕಾಲೇಜು, ಸನ್ ರೈಸ್ ಕಾಲೇಜು, ವಿಷನ್ ಕಾಲೇಜುಗಳ ಪ್ರಾಂಶುಪಾಲರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ವಿದ್ಯಾರ್ಥಿಗಳ ಹೋರಾಟಕ್ಕೆ ಬೆಂಬಲವನ್ನು ವ್ಯಕ್ತಪಡಿಸಿ, ಪ್ರತಿಭಟನೆಯ ಅಂತ್ಯದಲ್ಲಿ, ಪರೀಕ್ಷೆಯಲ್ಲಿನ ಅಕ್ರಮಗಳ ಕು–ರಿತು ಸಮಗ್ರ ತನಿಖೆ ನಡೆಸಬೇಕು, ತಪ್ಪಿತಸ್ಥ–ರಿಗೆ ಕಠಿಣ ಶಿಕ್ಷೆ ವಿಧಿಸಬೇಕು, ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಬೇಕು ಹಾಗೂ ಭವಿಷ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಪಾರದರ್ಶಕ ಪರೀಕ್ಷಾ ವ್ಯವಸ್ಥೆ ಜಾ–ರಿಗೊಳಿಸಬೇಕು ಎಂದು ಪ್ರತಿಭಟನಾ ನಿರತ ವಿದ್ಯಾರ್ಥಿಗಳು ಸರ್ಕಾರಕ್ಕೆ ಆಗ್ರಹಿಸಿದರು.

ಈ ಪ್ರತಿಭಟನೆಯಲ್ಲಿ: ಸಾಲಿಡಾ–ರಿಟಿ ಯೂತ್ ಮೂವ್ಮೆಂಟ್ ನ ಅಬುಲೈಸ್ ನಾಯಕ, ತಾಲ್ಲೂಕು ಅಧ್ಯಕ್ಷ ಅಫೈಲ್ ಹುಸೈನ್, ಘಟಕ ಅಧ್ಯಕ್ಷೆ ನೇಹಾ ಸಮ–ರೀನ್, ಮಹಿಳಾ ಘಟಕ ಅಧ್ಯಕ್ಷೆ ಸುಮಯ್ಯಾ ಪರ್ವೀನ್, ಮುಖಂಡರಾದ ಚಾಂದ್ ಪಾಷಾ ಜಾಗಿರ್ದಾರ್, ಶಫೀಲ್ಲಾ ಖಾನ್, ಸೊಹೈಲ್ ದೇಸಾಯಿ, ಖಾಜಿ ಜಾವೀದ್, ಇಸ್ಮಾಯಿಲ್, ನಯೀಮ್ ಇರ್ಫಾನ್, ಸೊಹೈಲ್, ಡಾ.ವಾಸಿಂ, ತನ್ವಿರ್, ಇಮ್ತಿಯಾಜ್, ಫಾರೂಕ್ ಅತ್ತಾರ್, ಸೈಯದ್ ಅಜ್ಜರ ಮನ್ಸೂರ್, ಯಹಿಯಾ ರಾಜ್ಜಿ, ಸೇರಿದಂತೆ ವಿವಿಧ ಸಂಘಟನೆಗಳ ಪದಾಧಿಕಾ–ರಿಗಳು, ಮುಖಂಡರು ಉಪಸ್ಥಿತರಿದ್ದರು.

## ಸಿಂಧನೂರು: NEET ಅಕ್ರಮ ಖಂಡಿಸಿ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸುವಂತೆ ಆಗ್ರಹಿಸಿ ಪ್ರತಿಭಟನೆ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಸಾಲಿಡಾರಿಟಿ ಯೂತ್ ಮೂವ್ಮೆಂಟ್ (SYM), ಸ್ಟೂಡೆಂಟ್ಸ್ ಇಸ್ಲಾಮಿಕ್ ಆರ್ಗನೈಸೇಶನ್ (SIO), ಗರ್ಲ್ಸ್ ಇಸ್ಲಾಮಿಕ್ ಆರ್ಗನೈಸೇಶನ್ (GIO) ಹಾಗೂ ಜಮಾಅತೆ ಇಸ್ಲಾಮಿ ಹಿಂದ್ (JIH) ಅವರ ಸಂಯುಕ್ತ ಆಶ್ರಯದಲ್ಲಿ ಇಂದು ಸಿಂಧನೂ–ರಿನಲ್ಲಿ NEET ಪರೀಕ್ಷೆಯಲ್ಲಿನ ಅಕ್ರಮಗಳನ್ನು ಖಂಡಿಸಿ ಹಾಗೂ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸುವಂತೆ ಆಗ್ರಹಿಸಿ ಪ್ರತಿಭಟನೆ ನಡೆಯಿತು.**

ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಜಮಾಅತೆ ಇಸ್ಲಾಮಿ ಹಿಂದ್ (JIH) ತಾಲ್ಲೂಕು ಅಧ್ಯಕ್ಷರಾದ ಹುಸೇನ್ ಸಾಬ್ ಅವರು, ಕೇಂದ್ರ ಸರ್ಕಾರವು ತನ್ನ ಸಂವಿಧಾನಬದ್ಧ ಮತ್ತು ನೈತಿಕ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿರ್ವಹಿಸುವಲ್ಲಿ ವಿಫಲವಾಗಿದೆ ಎಂದು ಆರೋಪಿಸಿದರು. NEET ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಸೇರಿದಂತೆ ಶಿಕ್ಷಣ ಕ್ಷೇತ್ರದಲ್ಲಿ ನಡೆದಿರುವ ಅಕ್ರಮಗಳಿಂದ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯ ಆತಂಕಕ್ಕೆ ಸಿಲುಕಿದೆ. ಈ ನಿರ್ಲಕ್ಷ್ಯದ ಪರಿಣಾಮವಾಗಿ ವಿದ್ಯಾರ್ಥಿಗಳು ಮಾನಸಿಕವಾಗಿ



ಕುಗ್ಗುವಂತಹ ಪರಿಸ್ಥಿತಿ ನಿರ್ಮಾಣವಾಗಿದ್ದು, ಸರ್ಕಾರ ವಿದ್ಯಾರ್ಥಿಗಳ ಧ್ವನಿಯನ್ನು ಆಲಿಸಿ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿದರು. ಅಲ್ಲದೆ, ದೆಹಲಿಯ ಜಂತರ್ ಮಂತರ್‌ನಲ್ಲಿ ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದ ವಿದ್ಯಾರ್ಥಿಗಳ ವಿರುದ್ಧ ಕೈಗೊಂಡ ಕ್ರಮವನ್ನು ಖಂಡಿಸಿ, ಲಡಾಖ್‌ನ ಪರಿಸರ ಹೋರಾಟಗಾರ ಸೋನಂ ವಾಂಗ್ಚುಕ್ ಅವರ ಬೇಡಿಕೆಗಳ ಕುರಿತು ಸರ್ಕಾರ ತೋರಿದ ನಿರ್ಲಕ್ಷ್ಯವನ್ನೂ ಟೀಕಿಸಿದರು.

ಮನುಜಮತ ಬಳಗದ ಬಸವರಾಜ್ ಬಾದರ್ಲಿ ಅವರು ಮಾತನಾಡಿ, ಕೇಂದ್ರ ಸರ್ಕಾರವು ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿದೆ ಎಂದು ಆರೋಪಿಸಿದರು. NEET ಪರೀಕ್ಷೆಯಲ್ಲಿನ ಅಕ್ರಮಗಳಿಂದ ದೇಶದ ವಿದ್ಯಾರ್ಥಿಗಳು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದು, ಈ ಹಿನ್ನೆಲೆಯಲ್ಲಿ ಜೀವ ಕಳೆದುಕೊಂಡ ವಿದ್ಯಾರ್ಥಿಗಳ ಕುಟುಂಬಗಳಿಗೆ ತಲಾ 1 ಕೋಟಿ ಪರಿಹಾರವನ್ನು ನೀಡಬೇಕು ಎಂದು ಆಗ್ರಹಿಸಿದರು. ಜೊತೆಗೆ, ಅಕ್ರಮಗಳಿಗೆ ಕಾರಣರಾದವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಂಡು, ಪಾರದರ್ಶಕ ಪರೀಕ್ಷಾ ವ್ಯವಸ್ಥೆಯನ್ನು ಜಾರಿಗೊಳಿಸುವಂತೆ ಒತ್ತಾಯಿಸಿದರು.

GIO ಘಟಕ ಅಧ್ಯಕ್ಷೆಯಾದ ನೇಹಾ ಸಮರೀನ್ ಅವರು ಮಾತನಾಡಿ, "ಇಂದಿನ ವಿದ್ಯಾರ್ಥಿಗಳೇ ನಾಳಿನ ದೇಶದ ಭವಿಷ್ಯ. ದೇಶವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ಶಕ್ತಿ ಯುವಜನತೆ ಮತ್ತು ವಿದ್ಯಾರ್ಥಿಗಳಲ್ಲಿದೆ. ಅಂತಹ ವಿದ್ಯಾರ್ಥಿಗಳ ಭವಿಷ್ಯದೊಂದಿಗೆ ಚೆಲ್ಲಾಟವಾಡುವುದು ಅತ್ಯಂತ ಖಂಡನೀಯ" ಎಂದು ಹೇಳಿದರು. NEET ಅಕ್ರಮಗಳಿಂದ ವಿದ್ಯಾರ್ಥಿಗಳಲ್ಲಿ ಉಂಟಾಗಿರುವ ಆತಂಕವನ್ನು ದೂರಗೊಳಿಸಿ ಅವರಿಗೆ ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಿದ ಅವರು, ಜಂತರ್ ಮಂತರ್‌ನಲ್ಲಿ ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದ ವಿದ್ಯಾರ್ಥಿಗಳ ವಿರುದ್ಧ ಕೈಗೊಂಡ ಕ್ರಮವನ್ನು ತೀವ್ರವಾಗಿ ಖಂಡಿಸಿದರು.

ಈ ಪ್ರತಿಭಟನೆಯಲ್ಲಿ ಸಾಲಿಡಾ–ರಿಟಿ ಯೂತ್ ಮೂವ್ಮೆಂಟ್ (SYM) ತಾಲ್ಲೂಕು ಅಧ್ಯಕ್ಷರಾದ ಅಬುಲೈಸ್ ನಾಯ್ಕ್, SIO ತಾಲ್ಲೂಕು ಅಧ್ಯಕ್ಷರಾದ ಅಫ್ಜಲ್ ಹುಸೈನ್, GIO ಘಟಕ ಅಧ್ಯಕ್ಷೆಯಾದ ನೇಹಾ ಸಮರೀನ್, JIH ತಾಲ್ಲೂಕು ಅಧ್ಯಕ್ಷರಾದ ಹುಸೇನ್ ಸಾಬ್, JIH ಮಹಿಳಾ ಘಟಕ ಅಧ್ಯಕ್ಷೆಯಾದ ಸುಮಯ್ಯಾ ಪರ್ವೀನ್, ಮನುಜಮತ ಬಳಗದ ಬಸವರಾಜ್ ಬಾದರ್ಲಿ, ಮುಖಂಡರಾದ ಚಾಂದ್ ಜಾಗಿರ್ದಾರ್, KVSನ ಚಾಂದ್ ಪಾಷಾ, ಶಫೀಲ್ಲಾ ಖಾನ್, ಸೊಹೈಲ್ ದೇಸಾಯಿ, ಖಾಜಿ ಜಾವೀದ್, ಇಸ್ಮಾಯಿಲ್, ನಯೀಮ್ ಇರ್ಫಾನ್, ಸೊಹೈಲ್, ಡಾ. ವಾಸಿಂ, ತನ್ವೀರ್, ಇಮ್ತಿಯಾಜ್, ಫಾರೂಕ್ ಅತ್ತಾರ್, ಅಜರ್, ಮನ್ಸೂರ್, ಯಹಿಯಾ ರಾಜ್ವಿ ಸೇರಿದಂತೆ ವಿವಿಧ ಸಂಘಟನೆಗಳ ಪದಾಧಿಕಾರಿಗಳು, ಮುಖಂಡರು ಉಪಸ್ಥಿತರಿದ್ದರು.

ಅಲ್ಲದೆ, ಅನ್ವಿತ ಕಾಲೇಜು, ಸನ್ ರೈಸ್ ಕಾಲೇಜು, ವಿಷನ್ ಕಾಲೇಜುಗಳ ಪ್ರಾಂಶುಪಾಲರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ವಿದ್ಯಾರ್ಥಿಗಳ ಹೋರಾಟಕ್ಕೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದರು.

ಪ್ರತಿಭಟನೆಯ ಅಂತ್ಯದಲ್ಲಿ, NEET ಪರೀಕ್ಷೆಯಲ್ಲಿನ ಅಕ್ರಮಗಳ ಕುರಿತು ಸಮಗ್ರ ತನಿಖೆ ನಡೆಸಬೇಕು, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಬೇಕು, ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಬೇಕು ಹಾಗೂ ಭವಿಷ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಪಾರದರ್ಶಕ ಪರೀಕ್ಷಾ ವ್ಯವಸ್ಥೆಯನ್ನು ಜಾರಿಗೊಳಿಸಬೇಕು ಎಂದು ಪ್ರತಿಭಟನಾಕಾರರು ಸರ್ಕಾರವನ್ನು ಆಗ್ರಹಿಸಿದರು.

# ನೇಮಕಾತಿ ಪ್ರಕಟಣೆ

**2026 – 1110 ಅಪ್ರೆಂಟಿಸ್ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ 18 ಜುಲೈ 2026**

**SAIL ನೇಮಕಾತಿ 2026: 1110 ಅಪ್ರೆಂಟಿಸ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಜುಲೈ 2026ರ ಅಧಿಕೃತ ಅಧಿಸೂಚನೆಯ ಮೂಲಕ ಅಪ್ರೆಂಟಿಸ್ ಹುದ್ದೆಗಳನ್ನು ಭರ್ತಿ ಮಾಡಲು, ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ 'ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ' (SAIL) ಅರ್ಜಿಗಳನ್ನು ಆಹ್ವಾನಿಸಿದೆ. ಒಡಿಶಾ ಸರ್ಕಾರದಲ್ಲಿ ಉದ್ಯೋಗವನ್ನು ಬಯಸುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 26–ಆಗಸ್ಟ್–2026 ರೊಳಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: sail.co.in**

## ಎಸ್ಸಿ, ಎಸ್ಟಿ ಸಮುದಾಯದವರು ಸರ್ಕಾರದ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕು : ಎಂ.ರಾಜಾಭಕ್ಷಿ

❏ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ: ಸರ್ಕಾರದ ವಿವಿಧ ಯೋಜನೆಗಳನ್ನು, ಸೌಲಭ್ಯಗಳನ್ನು ಅರಿತುಕೊಂಡು, ಅವುಗಳನ್ನು ಸಮರ್ಪಕವಾಗಿ ಸದ್ಬಳಕೆ ಮಾಡಿಕೊಳ್ಳುವ ಮೂಲಕ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು (ಎಸ್ಸಿ,ಎಸ್ಟಿ) ಸರ್ವಾಂಗೀಣ ಅಭಿವೃದ್ಧಿಯನ್ನು ಒಂದಬೇಕು ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ತಾಲ್ಲೂಕು ಸಮಿತಿಯ ಸದಸ್ಯರಾದ ಎಂ ರಾಜಾಭಕ್ಷಿ ತಿಳಿಸಿದರು.**



ಅವರು ನಂ 10 ಮುದ್ದಾಪುರ ಗ್ರಾ.ಪಂ ವ್ಯಾಪ್ತಿಯ ಕಣವಿ ತಿಮ್ಮಲಾಪುರ ಗ್ರಾಮದಲ್ಲಿ ಏಪೇಡಿಸಿದ್ದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಜಾಗೃತಿ ಸಭೆಯಲ್ಲಿ ಮಾತನಾಡಿದರು. ಪರಿಶಿಷ್ಟರ ಕಾಲೋನಿಗಳ ಅಭಿವೃದ್ಧಿಗೆ ಸರ್ಕಾರ ವಿಶೇಷ ಯೋಜನೆಗಳನ್ನು ರೂಪಿಸಿದೆ. ಕುಡಿಯುವ ನೀರು, ವಸತಿ, ರಸ್ತೆಗಳು ಸೇರಿದಂತೆ ಮೂಲ ಸೌಕರ್ಯಗಳನ್ನು ಒದಗಿಸಲಗುತ್ತಿದೆ.ಶಿಕ್ಷಣ ಸೌಲಭ್ಯ ಪಡೆದುಕೊಂಡು ಸಮಾಜದ ಮುಖ್ಯವಾಹಿನಿಯತ್ತ ಸಾಗಬೇಕು ಎಂದರು. ಸರ್ಕಾರದ ಪಂಚ ಗ್ಯಾರಂಡಿ, ಮತದಾರರ ಪಟ್ಟಿ ಪರಿಷ್ಕರಣೆ, ಹೊಸ ಮತದಾರರ ಸೇರ್ಪಡೆ ಕುರಿತು ಗ್ರಾಮಸ್ಥರಲ್ಲಿ ಜಾಗೃತಿ ಮೂಡಿಸಲಾಯಿತು. ಈ ಕಾರ್ಯಕ್ರಮದಲ್ಲಿ ಪಿಡಿಒ ಶಿಲ್ಪರಾಣಿ, ಆಡಳಿತಾಧಿಕಾರಿ ಎಂ.ನಾರಾಯಣಸ್ವಾಮಿ, ಗ್ರಾ.ಪಂ.ಮಾಜಿ ಸದಸ್ಯ ಆರ್. ಎಂ.ರಾಮಯ್ಯ, ವೆಂಕಟೇಶ್ ಸೇರಿದಂತೆ ಇತರರು ಇದ್ದರು.

## "ದುರ್ಗದ ಸಿರಿ ಪ್ರಶಸ್ತಿ"ಗೆ ಪತ್ರಕರ್ತ ಅಜ್ಮೀರ್ ನದಾಫ್ ಆಯ್ಕೆ

❏ ನೈಜ್ಯ ದೆಸೆ ನ್ಯೂಸ್

**ಅರಕೇರಾ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ದೇವದುರ್ಗ ಘಟಕದ ವತಿಯಿಂದ ಪತ್ರಿಕಾ ದಿನಾಚರಣೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭವು ದಿನಾಂಕ 25.07.2026 ರಂದು ಶ್ರೀ ಖೇಣೇದ್ ಮುರಿಗೆಪ್ಪ ಕಲ್ಯಾಣ ಮಂಟಪ ದೇವದುರ್ಗದಲ್ಲಿ ನಡೆಯಲಿದೆ.**



ಕಾರ್ಯಕ್ರಮದಲ್ಲಿ ಎ. ವೆಂಕಟೇಶ ನಾಯಕ ಅವರ ಸ್ಮರಣಾರ್ಥವಾಗಿ ನೀಡಲಾಗುವ ಪ್ರತಿಷ್ಠಿತ "ದುರ್ಗದ ಸಿರಿ ಪ್ರಶಸ್ತಿ"ಗೆ ಈ ಬಾರಿ ಉದಯವಾಣಿ ದಿನಪತ್ರಿಕೆಯ ಪತ್ರಕರ್ತರಾದ ಅಜ್ಮೀರ್ ನದಾಫ್ ಅವರು ಆಯ್ಕೆಯಾಗಿದ್ದಾರೆ.

ಪತ್ರಿಕಾ ಕ್ಷೇತ್ರದಲ್ಲಿ ಅವರು ಸಲ್ಲಿಸಿದ ಸೇವೆ, ಜನಪರ ವರದಿಗಳು, ಬರಹಗಳ ಮೂಲಕ ಗುರುತಿಸಿಕೊಂಡಿರುವ ಹಿನ್ನೆಲೆಯಲ್ಲಿ ಅಜ್ಮೀರ್ ನದಾಫ್ ಅವರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಕಾರ್ಯಕ್ರಮದಲ್ಲಿ ಶಾಸಕರು, ಲೋಕಸಭಾ ಸದಸ್ಯರು, ಅನೇಕ ಗಣ್ಯರು ಮತ್ತು ಸಂಘದ ಪದಾಧಿಕಾರಿಗಳು, ಹಿರಿಯ ಪತ್ರಕರ್ತರು, ಸಾರ್ವಜನಿಕರು ಭಾಗವಹಿಸಲಿದ್ದಾರೆ. ಈ ಸಂದರ್ಭದಲ್ಲಿ ವರ್ಷದುದ್ದಕ್ಕೂ ಉತ್ತಮ ಸೇವೆ ಸಲ್ಲಿಸಿದ ಪತ್ರಕರ್ತರನ್ನು ಪ್ರಶಸ್ತಿಯನ್ನು ನೀಡಿ ಸನ್ಮಾನಿಸಲಾಗುವುದು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಗಂಜ್ ವರ್ತಕರ ಸಂಘದಿಂದ ಮಳೆಗಾಗಿ ವರಸಿದ್ದಿ ವಿನಾಯಕ ದೇವಸ್ಥಾನಕ್ಕೆ 501 ಬಿಂದಿಗೆ ನೀರು ಹಾಕಿ ಪ್ರಾರ್ಥನೆ

❏ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಪ್ರತಿವರ್ಷ ಮೇ ತಿಂಗಳ ಅಂತ್ಯದಲ್ಲಿಯೇ ಗುಡುಗು ಸಿಡಿಲಿನೊಂದಿಗೆ ಆರ್ಭಟಿಸುತ್ತಾ ಮಳೆರಾಯ ಕೃಪೆ ತೋರಿ, ರೈತರ ಮೊಗದಲ್ಲಿ ಸಂತಸ ಅರಳಿಸುತ್ತಿದ್ದ, ಆದರೆ ಈ ಬಾರಿ ಜುಲೈ ತಿಂಗಳು ಮುಗಿಯುತ್ತಾ ಬಂದರೂ ಕೂಡ ಮಳೆರಾಯ ಕೃಪೆ ತೋರದ ಕಾರಣ ಸಿಂಧನೂರು ಗಂಜ್ ವರ್ತಕರ ಸಂಘದಿಂದ ನಗರದ ವರಸಿದ್ದಿ ವಿನಾಯಕ ದೇವಸ್ಥಾನಕ್ಕೆ ವಿಶೇಷ ಪೂಜೆ ಸಲ್ಲಿಸಿ, ಭಕ್ತಿಯ ಭಜನೆ ಮಾಡಿ, 501 ಬಿಂದಿಗೆ ನೀರು ಹಾಕಿ, ಕಾಯ, ವಾಚಾ, ಮನಸ್ಸಿನಿಂದ, ಶ್ರದ್ಧಾ ಭಕ್ತಿಯಿಂದ ಮುಡಿ ಮೈಲಿಗೆಯಿಂದ ವರಸಿದ್ದಿ ವಿನಾಯಕನ ಮೂರ್ತಿಗೆ ನೀರು ಹಾಕುವ ಮೂಲಕ ಮಳೆ ಬರಲೆಂದು ಪ್ರಾರ್ಥನೆ ಮಾಡಿದರು.**



ನಗರದ ಕುಷ್ಟಗಿ ರಸ್ತೆಯಲ್ಲಿರುವ ಎಪಿಎಂಸಿ ಹತ್ತಿರದ ವರಸಿದ್ದಿ ವಿನಾಯಕ ದೇವಸ್ಥಾನದಲ್ಲಿರುವ ವರಸಿದ್ದಿ ವಿನಾಯಕ, ಈಶ್ವರ, ಷಣ್ಮುಖ, ಬಸವಣ್ಣ, ಕುಕ್ಕೆ ಸುಬ್ರಹ್ಮಣ್ಯ, ಹಾಗೂ ನವಗ್ರಹಗಳಿಗೆ 501 ಬಿಂದಿಗೆ ನೀರು ಹಾಕಿ ರೈತರ ಸಂತಸಕ್ಕಾಗಿ, ಮಳೆಗಾಗಿ, ಓಂ ನಮಃ ಶಿವಾಯ ಎನ್ನುತ್ತಾ ಗಂಜ್ ವರ್ತಕರು ವರಸಿದ್ದಿ ವಿನಾಯಕ ದೇವಸ್ಥಾನದ ಆವರಣದಲ್ಲಿ ನಿಂತು 501 ಬಿಂದಿಗೆ ನೀರು ಹಾಕುವವರೆಗೂ ಚಪ್ಪಾಳೆ ತಟ್ಟುತ್ತಾ ಓಂ ನಮಃ ಶಿವಾಯ ಎನ್ನುತ್ತಾ ಪ್ರಾರ್ಥಿಸುತ್ತಾ ನಿಂತಿದ್ದು ವಿಶೇಷ ಎನಿಸಿತು. ನೀರು ಹಾಕುವವರಿಗೆ ಪ್ರೋತ್ಸಾಹಿಸಿ ಮಳೆ ಬರಲು ಶ್ರದ್ದೆ ಭಕ್ತಿಯಿಂದ ದೇವರ ಮೊರೆ ಹೋಗಿ ದೇವಸ್ಥಾನದ ಒಳಗಡೆ ಭಜನಾ ಮಂಡಳಿಯಿಂದಲೂ ನಿರಂತರವಾಗಿ ಭಜನೆ ನಡೆಸಿ ಪ್ರಾರ್ಥಿಸಿದರು.

ಈ ಸಂದರ್ಭದಲ್ಲಿ: ಗಂಜ್ ವರ್ತಕರ ಸಂಘದ ಗೌರವಾಧ್ಯಕ್ಷ ಮಲ್ಲನಗೌಡ, ಅಧ್ಯಕ್ಷ ದೊಡ್ಡನಗೌಡ, ಪ್ರಧಾನ ಕಾರ್ಯದರ್ಶಿ ಪಕೀರಪ್ಪ ಬಾಗೋಡಿ ತಿಡಿಗೋಳ, ಸಹ ಕಾರ್ಯದರ್ಶಿ ಅಯ್ಯನಗೌಡ, ಉಪಾಧ್ಯಕ್ಷ ನವರತ್ನ ಸೇಠ್, ಖಜಾಂಚಿ ಶರಣೇಗೌಡ ಶಾನಬಾಳ, ವರಸಿದ್ದಿ ವಿನಾಯಕ ದೇವಸ್ಥಾನದ ಸಮಿತಿ ಅಧ್ಯಕ್ಷ ಸುಮಿತ್ ಸೇಠ್, ಗಂಜ್ ವರ್ತಕರ ಸಂಘದ ಪದಾಧಿಕಾರಿಗಳಾದ ಮಲ್ಲಪ್ಪ ಮೈಲಾರ, ಲಿಂಗರಾಜ ಹೊಸಳ್ಳಿ, ಶಿವಪುತ್ರಪ್ಪ, ಅಯ್ಯಾಳಪ್ಪ, ಲಿಂಗಪ್ಪ ಕಾನಿಹಾಳ, ಬಸವರಾಜ ಗೊರೇಬಾಳ, ಅಯ್ಯನಗೌಡ ಕಲ್ಲೂರು, ಸುರೇಶ, ಮಹೇಶ ಇನಮದಾರ್, ಕಾಂತಯ್ಯ, ಶರಣಯ್ಯ, ವಿಜಯ ಖಾಲಿಚೀಲ, ರಾಜು ಮಡಿಕೇರಿ, ಲಕ್ಷ್ಮಣ, ಬಸವರಾಜ ಬೊಮ್ಮನಾಳ, ಸಿದ್ದನಗೌಡ ವಿರುಪಾಪುರ, ಅಮರೇಶ ಮಾಡಸಿರವಾರ, ಕಾಂತಪ್ಪ ಗೋಗಿ, ಲಿಂಗರಾಜು ಏಳುಕುರಿ, ಕೆಕೆಟಿ ಅಮರೇಶ, ಸುಕಾಲಪೇಟೆ ಅಮರೇಶ, ಬಾಗೋಡಿ ಅಮರೇಶ ತಿಡಿಗೋಳ, ಬಸವರಾಜ ಗುಂಡಸಾಗರ, ಅರ್ಚಕರಾದ ಶರಣಯ್ಯತಾತ ಸೇರಿದಂತೆ ನೂರಾರು ಗಂಜ್ ವರ್ತಕರ ಸಂಘದ ಸರ್ವ ಸದಸ್ಯರು ಭಾಗವಹಿಸಿ ಮಳೆಗಾಗಿ ಪ್ರಾರ್ಥಿಸಿದರು.

# ಸರ್ಕಾರದ ಗ್ಯಾರಂಟಿ ಯೋಜನೆಗಳಿಂದ ಹಿಂದುಳಿದ ವರ್ಗಗಳಿಗೆ ಅನುಕೂಲವಾಗಿದೆ : ಕೆ.ಶ್ರೀನಿವಾಸರಾವ್



❏ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ಕಳೆದ ಮೂರು ವರ್ಷಗಳಿಂದ ರಾಜ್ಯದ ಅಧಿಕಾರದ ಚುಕ್ಕಾಣಿ ಹಿಡಿದಿರುವ ಕಾಂಗ್ರೆಸ್ ಸರ್ಕಾರ ನೀಡಿರುವ ಪಂಚ ಗ್ಯಾರಂಟಿ ಯೋಜನೆಗಳು ರಾಜ್ಯ ಜನತೆಗೆ ಅದರಲ್ಲೂ ಹಿಂದುಗಳಿದ ವರ್ಗಗಳಿಗೆ ಅನುಕೂಲವಾಗಿವೆ ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠನ ಸಮಿತಿ ತಾಲ್ಲೂಕು ಅಧ್ಯಕ್ಷ ಕೆ.ಶ್ರೀನಿವಾಸರಾವ್ ತಿಳಿಸಿದರು.**

ಅವರು ತಾಲ್ಲೂಕಿನ ಹಂಪಾದೇವನಹಳ್ಳಿ ಗ್ರಾ.ಪಂ.ವ್ಯಾಪ್ತಿಯ ಜವುಕು ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಪಂಚ ಗ್ಯಾರಂಟಿ ಯೋಜನೆಗಳ ಜಾಗೃತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಹಾಗೂ ವಿಬಿ ರಾಮಜಿ ಪ್ರಚಾರ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ನೋಂದಾಯಿಸಿಕೊಂಡ ಫಲಾನುಭವಿಗಳಿಗೆ ಗ್ಯಾರಂಟಿಗಳನ್ನು ತಲುಪಿಸಲಾಗವುದು. ಯಾವುದೇ ಕಾರಣಕ್ಕೂ ಪಂಚ ಗ್ಯಾರಂಟಿಗಳನ್ನು ನಿಲ್ಲಿಸದೇ ಅರ್ಹರಿಗೆ ಸೂಕ್ತವಾಗಿ ತಲುಪಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದರು. ತಾ.ಪಂ.ಇಒ ಆರ್.ಕೆ.ಶ್ರೀಕುಮಾರ್ ಮಾತನಾಡಿ ಸರ್ಕಾರದ ಗ್ಯಾರಂಟಿಗಳನ್ನು ಬಳಸಿಕೊಂಡು ಪ್ರಗತಿ ಸಾದಿಸಬೇಕು.

ಸರ್ಕಾರದ ಗೃಹಲಕ್ಷ್ಮೀ, ಗೃಹಜ್ಯೋತಿ, ಶಕ್ತಿ ಯೋಜನೆ ಸೇರಿದಂತೆ ಇತರೆ ಯೋಜನೆಗಳು ಹಿಂದುಳಿದ ಜನತೆಗೆ ವರದಾನವಾಗಿವೆ. ಗ್ಯಾರಂಟಿಗಳನ್ನು ಕಡಿತಗೊಳಿಸದೇ ಎಲ್ಲರಿಗೂ ತಲುಪಿಸಲಾಗುವುದು ಎಂದರು. ಕಾರ್ಯಕ್ರಮದಲ್ಲಿ ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯರಾದ ಶಿವಕುಮಾರ್, ವೀರಭದ್ರಗೌಡ, ಎಂ.ರಾಜಾಭಕ್ಷಿ ಮುಖಂಡರಾದ ರಾಜೇಗೌಡ, ಎ.ಹುಲುಗಪ್ಪ, ಎ.ಕಿಮಾರಸ್ವಾಮಿ, ಹನುಮಂತಪ್ಪ, ಸಿ.ಬಸವರಾಜ, ಎಸ್.ಬಸವರಾಜ, ಪಿಡಿಒ ಬೀರಲಿಂಗ, ಐಈಸಿ ಸಂಯೋಜಕ ಎಚ್.ಹನುಮೇಶ, ಡಿಇಒ ನಾಗರಾಜ, ಕರವಸೂಲಿಗಾರ ಜಡೆಯ್ಯಸ್ವಾಮಿ, ಬಿಎಫ್‌ಟಿ ಪಂಪಾಪತಿ, ಎಂಬಿಕೆ ಪುಷ್ಪಾವತಿ ಸೇರಿದಂತೆ ಸಾರ್ವಜನಿಕರು ಭಾಗವಹಿಸಿದ್ದರು.

# ಮಳೆ ಪ್ರಮಾಣ ಗಮನದಲ್ಲಿಟ್ಟುಕೊಂಡು ರೈತರು ಅತಿ ಜಾಗೃತಕತೆಯಿಂದ ಬೆಳೆ ಆಯ್ಕೆ ಮಾಡಿಕೊಳ್ಳಿ : ತಹಶೀಲ್ದಾರ್ ಜೂಗಲ್ ಮಂಜುನಾಯಕ

❏ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ: ಈ ಬಾರಿಯ ಮುಂಗಾರು ಮಳೆಗಳು ವಾಡಿಕೆಯಿಂದ ಕಡಿಮೆಯಾಗಿದ್ದು, ರೈತರು ಮಿಶ್ರ ಬೆಳೆಗಳತ್ತಾ ಮುಖ ಮಾಡಬೇಕು. ಮತ್ತು ಇರುವ ಅಲ್ಪಸ್ವಲ್ಪ ನೀರಿನ ಲಭ್ಯತೆಯ ಆಧಾರದ ಮೇಲೆ ಬೆಳೆಗಳನ್ನು ಬೆಳೆಯಬೇಕು ಎಂದು ತಹಶೀಲ್ದಾರ್ ಜೂಗಲ್ ಮಂಜುನಾಯಕ ಹೇಳಿದರು.**



ಪಟ್ಟಣದ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ತಾಲೂಕು ಆಡಳಿತ, ಕೃಷಿ ಇಲಾಖೆ ಸಹಯೋಗದಲ್ಲಿ 2026–27ನೇ ಸಾಲಿನ ಆತ್ಮ ಯೋಜನೆಯಡಿ ಬೆಳೆ ವಿಮೆ, ಪರ್ಯಾಯ ಬೆಳೆ ಪದ್ಧತಿ, ಬರಗಾಲ ನೀರಿನ ಕ್ರಮಗಳ ಕುರಿತು ತರಬೇತಿ ಕಾರ್ಯಗಾರ ಹಾಗೂ ರೈತ ಮತ್ತು ವಿಜ್ಞಾನಿಗಳ ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಇಂದಿನ ದಿನಮಾನದ ಮಳೆ ಪ್ರಮಾಣ ಗಮನದಲ್ಲಿಟ್ಟುಕೊಂಡು ರೈತರು ಮುಂದಿನ ಬೆಳೆ ಬೆಳೆಯಲು ಅತಿ ಜಾಗೃತಕತೆಯಿಂದ ಆಯ್ಕೆ ಮಾಡಿಕೊಳ್ಳುವುದು ತುಂಬ ಉತ್ತಮವಾಗಿದೆ. ನೀರಿನ ಲಭ್ಯತೆ ತಕ್ಕಂತೆ ಪರ್ಯಾಯ ಬೆಳೆಗಳನ್ನು ಬೆಳೆದು, ರೈತರು ತಮ್ಮ ಬದುಕು ಕಟ್ಟಿಕೊಳ್ಳಬೇಕು ಎಂದರು.

ನಂತರ ಗಂಗಾವತಿ ಕೃಷಿ ವಿಜ್ಞಾನ ಕೇಂದ್ರದ ಮಣ್ಣು ವಿಜ್ಞಾನಿ ಡಾ.ಎಂ.ಬಿ.ರವಿ ಮಾತನಾಡಿ, ಈಗಾಗಲೇ ಜಿಲ್ಲೆಯಲ್ಲಿ ಬರಗಾಲದ ಮುನ್ಸೂಚನೆ ಕಂಡು ಬರುತ್ತಿದೆ. ಆದ್ದರಿಂದ ಅನ್ನದಾತರು ಪ್ರಸ್ತುತ ವಾತಾವರಣಕ್ಕೆ ತಕ್ಕಂತೆ ಬರ ನಿರೋಧಕ ಶಕ್ತಿ ಹೊಂದಿರುವ ಹಾಗೂ ಅಲ್ಪಾವಧಿ ಬೆಳೆಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಬರೀ ಭತ್ತ ನಾಟಿ ಮಾಡುವ ಬದಲು ಕೂರಿಗೆ ಬಿತ್ತನೆ ಕಡೆಗೆ ರೈತರು ಮುಖ ಮಾಡಬೇಕಾಗಿದೆ. ಇದರಲ್ಲಿ ಅತಿ ಹೆಚ್ಚಾಗಿ ಬೀಜೋಪಚಾರ ಅತಿ ಮುಖ್ಯವಾಗಿದೆ. ರೈತರ ಜಮೀನುಗಳಲ್ಲಿ ಅಂತರ ಬೇಸಾಯ ಪದ್ಧತಿಯನ್ನು ಹೆಚ್ಚಿಸಿಕೊಳ್ಳಬೇಕು. ಕೀಟನಾಶಕ ಮತ್ತು ರಾಸಾಯನಿಕ ಬಳಕೆ ಕಡಿಮೆ ಮಾಡಬೇಕು ಎಂದರು.

ಸಹಾಯಕ ಕೃಷಿ ನಿರ್ದೇಶಕ ಮಂಜುನಾಥ ರೆಡ್ಡಿ ಮಾತನಾಡಿ, ನೀರಿನ ಅವಶ್ಯಕತೆಗೆ ತಕ್ಕಂತೆ ಅಲ್ಪಾವಧಿ ಬೆಳೆಗಳನ್ನು ಬೆಳೆಯಬೇಕು. ಕೃಷಿ ಹೊಂಡ, ಬದು ನಿರ್ಮಾಣದ ಮೂಲಕ ಅಂತರ್ಜಲ ಹೆಚ್ಚಿಸಿಕೊಳ್ಳಬೇಕು. ಫಸಲ್ ಭೀಮಾ ಯೋಜನೆಯ ಸದುಪಯೋಗಪಡಿಸಿಕೊಳ್ಳಬೇಕು ಎಂದರು. ಈ ಸಂದರ್ಭದಲ್ಲಿ ಸಹಾಯಕ ತೋಟಗಾರಿಕೆ ಅಧಿಕಾರಿ ಚೇತನ್ ಕುಮಾರ, ಕೃಷಿ ಅಧಿಕಾರಿ ಜ್ಯೋತಿ, ಕೃಷಿಕ ಸಮಾಜದ ಅಧ್ಯಕ್ಷ ವಿಪ್ರದ ನಾರಾಯಣಪ್ಪ, ರೈತ ಸಂಘದ ಅಧ್ಯಕ್ಷ ತಿಮ್ಮಪ್ಪ ನಾಯಕ, ಜಿಲ್ಲಾ ಪ್ರತಿನಿಧಿ ದೊಡ್ಡಬಸಪ್ಪ, ಸಹಾಯಕ ತಾಂತ್ರಿಕ ವ್ಯವಸ್ಥಾಪಕ ಎಸ್.ರೇಣುಕಾರಾಜ್, ಮುಖಂಡರಾದ ಡಿ.ಮುರಾರಿ ಸೇರಿದಂತೆ ಅಧಿಕಾರಿಗಳು ರೈತರು, ಸಿಬ್ಬಂದಿ ಇದ್ದರು.

# ಗಾಂಧಿನಗರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರ: ಡಾ.ಸೀಮಾ,

❏ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಉಚಿತ ಸಮಗ್ರತ ಆರೋಗ್ಯ ತಪಾಸಣೆ ಶಿಬಿರ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಈ ಆರೋಗ್ಯ ತಪಾಸಣೆಯ ಶಿಬಿರವನ್ನು ಗ್ರಾಮದ ಎಲ್ಲಾ ಹಿರಿಯ ನಾಗರಿಕರು ಸದುಪಯೋಗ ಪಡೆದುಕೊಳ್ಳಬೇಕು. ಬಿಪಿ, ಟಿಬಿ, ಮಧುಮೇಹ, ಇತ್ಯಾದಿ ಮಾರಕ ಕಾಯಿಲೆಗಳನ್ನು ಪರೀಕ್ಷಿಸಿಕೊಳ್ಳಬೇಕೆಂದು ಪ್ರಾಥಮಿಕ ಆರೋಗ್ಯ ಕೇಂದ್ರದ ಆಯುಷ್ ವೈದ್ಯಾಧಿಕಾರಿ ಡಾ.ಸೀಮಾ ಹೇಳಿದರು.**



ಜಿಲ್ಲಾಡಳಿತ ಜಿಲ್ಲಾ ಪಂಚಾಯತರಾಜ್, ಕರ್ನಾಟಕ ರಾಜ್ಯ ಏಡ್ಸ್ ನಿಯಂತ್ರಣ ಸಂಸ್ಥೆ ಬೆಂಗಳೂರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಜಿಲ್ಲಾ ಏಡ್ಸ್ ತಡೆ ಮತ್ತು ನಿಯಂತ್ರಣ ಘಟಕ ರಾಯಚೂರು, ತಾಲೂಕು ಅರೋಗ್ಯಾಧಿಕಾರಿಗಳ ಕಚೇರಿ ಐಸಿಟಿಸಿ ಕೇಂದ್ರ ಸಿಂಧನೂರು, ಮೊಬೈಲ್ ಐಸಿಟಿಸಿ ರಾಯಚೂರು, ಪ್ರಾಥಮಿಕ ಆರೋಗ್ಯ ಕೇಂದ್ರ ಗಾಂಧಿನಗರದಲ್ಲಿ ಹೊಸಬೆಳಕು ಹೇಲ್ತ್‌ಜೆ ಇಂಡಿಯಾ, ಸೆಂಟಲೂಕ್ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಯುಕ್ತಾಶ್ರಯದಲ್ಲಿ ಜು.22 ರಂದು ಸಮಗ್ರ ಆರೋಗ್ಯ ತಪಾಸಣೆ ಶಿಬಿರ ಕಾರ್ಯಕ್ರಮವನ್ನು ಹಮ್ಮಿಕೊಂಡು ಮಾತನಾಡಿದರು.

ನಂತರ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಗೀತಾ ಹಿರೇಮಠ ಮಾತನಾಡಿ, 30 ವರ್ಷ ಮೇಲ್ಪಟ್ಟ ಎಲ್ಲಾ ಸಾರ್ವಜನಿಕರು ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಿ, ಮದುಮೇಹ ದೇಹದ ರಕ್ತದಲ್ಲಿನ ಗ್ಲುಕೋಸ್ ಅಥವಾ ಸಕ್ಕರೆಯ ಅಂಶ ಹೆಚ್ಚಿನ ಪ್ರಮಾಣದಲ್ಲಿರುವುದನ್ನು ಸಕ್ಕರೆ ಕಾಯಿಲೆ ಎನ್ನುತೇವೆ. ಮಧುಮೇಹ ಚಿಕಿತ್ಸೆ ನೀಡದಿದ್ದಲ್ಲಿ ಹೃದಯಕ್ಕೆ ಸಂಬಂಧಪಟ್ಟ ಕಾಯಿಲೆಗಳು, ಮೂತ್ರಪಿಂಡದ ಕಾಯಿಲೆಗೆ ತುತ್ತಾಗಬೇಕಾಗುತ್ತದೆ. ಕಾರಣ ತಪಾಷಣೆ ಸಕಾಲಕ್ಕೆ ಪಡೆದುಕೊಳ್ಳಬೇಕು ಎಂದರು.

ಈ ಶಿಬಿರದಲ್ಲಿ ಎಚ್ಐವಿ ತಪಾಸಣೆ ಸಮುದಾಯ ಮಟ್ಟದಲ್ಲಿ ಮಾಡಲಾಯಿತು. ಮತ್ತು ಅದರ ಬಗ್ಗೆ ಆರೋಗ್ಯ ಶಿಕ್ಷಣ ನೀಡಲಾಯಿತು. ಈ ವೇಳೆ ಜಿಲ್ಲಾ ಮೇಲ್ವಿಚಾರಕ ಮಲ್ಲಯ್ಯ ಮಠಪತಿ, ಹೇಲ್ತ್‌ಜೆ ಇಂಡಿಯಾ ವ್ಯವಸ್ಥಾಪಕರು, ವೈದ್ಯಾಧಿಕಾರಿಗಳು, ಮತ್ತು ಅವರ ತಂಡ, ಎಸ್ಪಿಎಸ್ ಯಮನೂರ, ಓಂಪ್ರಕಾಶ್, ಐಸಿಟಿಸಿ ತಂಡ, ಗಾಂಧಿನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಸಂಧ್ಯಾ, ರಾಧಾ, ಆಶಾ ಕಾರ್ಯಕರ್ತೆಯರು, ವಿವಿಧ ಕಾರ್ಯಕ್ರಮದ ಎನ್‌ಜಿಒ ಸಿಬ್ಬಂದಿಗಳು ಸಾರ್ವಜನಿಕರು ಉಪಸ್ಥಿತರಿದ್ದರು.

# ರಬ್ಬರ್ ಹಂಪ್ಸ್ ಹಾಗೂ ಸಂಚಾರ ಸಿಗ್ನಲ್‌ಗಳನ್ನು ಅಳವಡಿಸುವಂತೆ : ಕರವೇ ಸ್ವಾಭಿಮಾನಿ ಸೇನೆ ಬೃಹತ್ ಪ್ರತಿಭಟನ ಮೆರವಣಿಗೆ

❏ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಪಟ್ಟಣದ ಗಡಿಯಾರ ವೃತ್ತದಿಂದ ಬಸ್ ನಿಲ್ದಾಣದ ಅಂಬೇಡ್ಕರ್ ವೃತ್ತದ ವರೆಗೆ ಬೃಹತ್ ಪ್ರತಿಭಟನ ಮೆರವಣಿಗೆ ಯನ್ನು ಕರವೇ ಸ್ವಾಭಿಮಾನಿ ಸೇನೆ ವತಿಯಿಂದ ನಡೆಸಿದರು . ಅಂಬೇಡ್ಕರ್ ವೃತ್ತದಲ್ಲಿ ಪ್ರತಿಭಟನಕಾರರು ವೃತ್ತಕಾರದಲ್ಲಿ ನಿಂತು ಘೋಷಣೆ ಕೂಗಿ ಪ್ರತಿಭಟನೆ ನಡೆಸುವ ಸಂದರ್ಭದಲ್ಲಿ ಅಂಬೇಡ್ಕರ್ ವೃತದ ಸುತ್ತ ಮುತ್ತ ಟ್ರಾಫಿಕ್ ಜಾಮ್ ಆದಕಾರಣ ಪೊಲೀಸರು ಪ್ರತಿಭಟನ ಕಾರರನ್ನು ಬಂಧಿಸಿ ಬಿಡುಗಡೆ ಗೊಳಿಸಿದರು.**

ನಂತರ ಮಾತನಾಡಿದ ಕರವೇ ಸ್ವಾಭಿಮಾನಿ ಸೇನೆ ತಾಲೂಕ ಅಧ್ಯಕ್ಷ ಜಿಲಾನಿ ಪಾಶ ಪಟ್ಟಣದ ಪ್ರಮುಖ ಸಂಚಾರ ಸ್ಥಳವಾದ ಅಂಬೇಡ್ಕರ್ ವೃತ್ತದ ಬಳಿ ದಿನನಿತ್ಯ ಹೆಚ್ಚಿನ ಸಂಖ್ಯೆಯಲ್ಲಿ ವಾಹನಗಳು ಸಂಚರಿಸುತ್ತಿದ್ದು, ಸಾರ್ವಜನಿಕರು, ವಿದ್ಯಾರ್ಥಿಗಳು ಹಾಗೂ ಪಾದಚಾರಿಗಳು ರಸ್ತೆ ದಾಟಲು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಈ ಸ್ಥಳದಲ್ಲಿ ವಾಹನಗಳ ಅತಿಯಾದ ವೇಗದಿಂದಾಗಿ ಅಪಘಾತಗಳ ಸಂಭವ ಹೆಚ್ಚಾಗಿದ್ದು, ಸಾರ್ವಜನಿಕರ ಜೀವಕ್ಕೆ ಅಪಾಯ ಉಂಟಾಗುವ ಪರಿಸ್ಥಿತಿ ನಿರ್ಮಾಣವಾಗಿದೆ.

ಅಂಬೇಡ್ಕರ್ ವೃತ್ತ ಹಾಗೂ ಐಎಂಎ ಹಾಲ್ ಬಳಿ ರಬ್ಬರ್ ಹಂಪ್ಸ್‌ಗಳನ್ನು ಆಳವಡಿಸುವುದು ಹಾಗೂ ಅಗತ್ಯ ಸಂಚಾರ ಸಿಗ್ನಲ್‌ಗಳನ್ನು ಸ್ಥಾಪಿಸುವಂತೆ ಈ ಹಿಂದೆ ಮನವಿ ಸಲ್ಲಿಸಲಾಗಿತ್ತು ಆದರೆ ಪುರಸಭೆ ಅಧಿಕಾರಿಗಳು ನಮ್ಮ ಮನವಿಗೆ ಸ್ಪಂಧಿಸದೇ ನಿರ್ಲಕ್ಷ್ಯವಹಿಸಿದ್ದಾರೆ.

ಅಲ್ಲದೇ ಸಹಾಯಕ ಆಯುಕ್ತರಿಗೂ ಮನವಿ ಸಲ್ಲಿಸಲಾಗಿತ್ತು ಆದರೆ ಲೋಕೋಪಯೋಗಿ ಇಲಾಖೆಯವರು ಪುರಸಭೆ ವ್ಯಾಪ್ತಿಯ 5 ಕಿಲೋಮೀಟರ್ ವರೆಗೆ ನಮ್ಮ ಇಲಾಖೆಯ ವ್ಯಾಪ್ತಿಗೆ ಸಂಬಂಧಪಡುವುದಿಲ್ಲವೆಂದು ಹಿಂಬರಹ ನೀಡಿದ್ದಾರೆ. ಪುರಸಭೆ ಅಧಿಕಾರಿಗಳು ಮಾತ್ರ ಯಾವುದೇ ಕ್ರಮಕ್ಕೆ ಮುಂದಾಗದೇ ಕೈ ಕಟ್ಟಿ ಕುಳಿತ್ತಿರುವುದು ಮಾತ್ರ ಖಂಡನೀಯ ವಿಷಯವಾಗಿದೆ. ಅಲ್ಲದೇ ಪಟ್ಟಣದ ವಿವಿಧ ವಾರ್ಡ್‌ಗಳಲ್ಲಿ ನಿರ್ಮಿಸಿರುವ ಸಿಸಿ ರಸ್ತೆಗಳು ಅವೈಜ್ಞಾನಿಕವಾಗಿದ್ದು,



ಅಪಘಾತಗಳು ಸಂಭವಿಸಿ ಆಸ್ಪತ್ರೆ ಸೇರಿದ ಹಲವು ಉದಾಹರಣೆಗಳಿವೆ. ಆದರೆ ಪುರಸಭೆ ಅಧಿಕಾರಿಗಳು ಮಾತ್ರ ಇದಕ್ಕೂ ತಮಗೂ ಯಾವುದೇ ಸಂಬಂಧವಿಲ್ಲದಂತೆ ವರ್ತಿಸುತ್ತಿದ್ದಾರೆ. ಸಂಚಾರ ಸುರಕ್ಷತೆಗಾಗಿ ಕೈಗೊಳ್ಳಬೇಕಾದ ಕನಿಷ್ಠ ಕ್ರಮಗಳಾದ ಹಂಪ್ಸ್ ಹಾಗೂ ಸಿಗ್ನಲ್ ಅಳವಡಿಕೆಯಲ್ಲಿ ವಿಳಂಬವಾಗುತ್ತಿರುವುದರಿಂದ ಯಾವುದೇ ಅನಾಹುತ ಸಂಭವಿಸಿದರೆ ಅದರ ಹೊಣೆ ಯಾರು ಎಂಬ ಪ್ರಶ್ನೆ ಸಾರ್ವಜನಿಕರಲ್ಲಿ ಮೂಡಿದೆ. ಜನರ ಸುರಕ್ಷತೆ ಸಂಬಂಧಿಸಿದ ವಿಷಯದಲ್ಲಿ ಅಧಿಕಾರಿಗಳು ತಕ್ಷಣ ಸ್ಪಂದಿಸುವ ಅಗತ್ಯವಿದೆ.

ಆದ್ದರಿಂದ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಪುರಸಭೆ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಿ, ಅಂಬೇಡ್ಕರ್ ವೃತ್ತ ಹಾಗೂ ಐಎಂಎ ಹಾಲ್ ಬಳಿ ಕೂಡಲೇ ರಬ್ಬರ್ ಹಂಪ್ಸ್‌ಗಳನ್ನು ಅಳವಡಿಸಿ, ಅಗತ್ಯ ಸಂಚಾರ ಸಿಗ್ನಲ್ ಅಳವಡಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಅರಬೆತ್ತಲೆ ಮೆರವಣಿಗೆ ಹಮ್ಮಿಕೊಳ್ಳಬೇಕಾದ ಅನಿವಾರ್ಯತೆ ಎದುರಾಗುತ್ತದೆ ಎಂದು ಎಚ್ಚರಿಸಿದರು . ಈ ಸಂದರ್ಭದಲ್ಲಿ ರವಿಕುಮಾರ್ ಬರಗುಡಿ, ಶೇಕ್ ಅಜ್ಮಿರ್ , ಆಜೀಜ್ ಪಾಶ , ಮೋಹಸಿನ್ ಖಾನ್ , ಮರಿಯಪ್ಪ ಹಿರೇನಗನೂರ್ , ಬಸನಗೌಡ , ಅಮರೇಶ್ , ಮಲ್ಲನ ಗೌಡ , ಜಮೀರ್ ಖಾನ್ , ಇಲಿಯಾಸ್ , ತಿಪಣ್ಣ ಸಾಹುಕಾರ್ , ಬಸನಗೌಡ ಹಿರೇನಗನೂರ್ ಸೇರಿದಂತೆ ಮುದಗಲ್ , ಹಾಗೂ ಗ್ರಾಮ ಘಟಕದ ಸದಸ್ಯರು ಇದ್ದರು .

